# ರಾಷ್ಟ್ರೋತ್ಥಾನ ಪರಿಷತ್

ಕೇಶವಶಿಲ್ಪ, ಕೆಂಪೇಗೌಡನಗರ, ಬೆಂಗಳೂರು - 560 004
E-mail: rp@rashtrotthana.org Website: www.rashtrotthana.org

ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ



# ವಾರ್ಷಿಕ ವರದಿ 2020-21



# ಪ್ರಕಲ್ಪಗಳು

- ಜಾಗರಣ
- ಶೈಕ್ಷಣಿಕ ಚಟುವಟಿಕೆಗಳು
- ರಾಷ್ಟ್ರೋತ್ಥಾನ ಆರೋಗ್ಯಸೇವಾ ಕೇಂದ್ರ
- ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ
- ರಾಷ್ಟ್ರೋತ್ಥಾನ ಬಳಗ
- ಸಂವಿತ್
- ರಾಷ್ಟ್ರೋತ್ಥಾನ ರಿಸರ್ಚ್ ಫೌಂಡೇಷನ್
- ರಾಷ್ಟ್ರೋತ್ಥಾನ ಮುದ್ರಣಾಲಯ
- ರಾಷ್ಟ್ರೋತ್ಥಾನ ಸಾಹಿತ್ಯ
- ಸಾಹಿತ್ಯ ಸಿಂಧು ಪ್ರಕಾಶನ
- ಗೀತಭಾರತಿ
- ಉತ್ಥಾನ



# ನಡೆದು ಬಂದ ಹಾದಿ... ಬದ್ಧತೆಯ ಹೆಜ್ಜೆಗಳು...

ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ ಎಂಬ ಲಕ್ಷ್ಯದಿಂದ (Vision) ರಾಷ್ಟ್ರೋತ್ಥಾನ ಪರಿಷತ್ ಕಳೆದ 56 ವರ್ಷಗಳಿಂದ ಕಾರ್ಯೋನ್ಮುಖವಾಗಿದೆ. "ಸಂದರ್ಭ ಅನುಕೂಲಕರವಾಗುವಂತೆ ಏರ್ಪಡಲಿ. ಆಮೇಲೆ ಕೆಲಸ ಮಾಡೋಣ – ಎಂದು ಕಾಯುತ್ತ ಕೂರದೇ, ಅಂತಹ ಸಂದರ್ಭವನ್ನು ಸೃಷ್ಟಿಮಾಡಿ ಮುಂದಕ್ಕೆ ಸಾಗುತ್ತಿರಿ" ಎಂಬ ಆರೆಸ್ಸೆಸ್‌ನ ದಿ| ಯಾದವರಾವ್ ಜೋಶಿ ಅವರ ಹಾರೈಕೆಯಂತೆ, ನಿರಂತರವಾಗಿ ಸೇವಾವಕಾಶಗಳನ್ನು ಹುಡುಕಿಕೊಂಡು, ನಮ್ಮ ಪರಿಧಿಯಲ್ಲಿ ಸಮಾಜವನ್ನು ಹೇಗೆ ಹೆಚ್ಚು ಸಚೇತನಗೊಳಿಸಬಹುದು ಎಂಬ ದಿಕ್ಕಿನಲ್ಲಿ 'ಚರೈವೇತಿ ಚರೈವೇತಿ' ಎಂಬಂತೆ ದೃಢವಾದ ಹೆಜ್ಜೆಗಳನ್ನಿಡುತ್ತ ರಾಷ್ಟ್ರೋತ್ಥಾನ ಪರಿಷತ್ ಮುಂದೆ ಸಾಗುತ್ತಿದೆ.

ಭಾರತೀಯತೆಯ ಪುನರ್‌ಜಾಗರಣೆಯ 'ಉತ್ಥಾನ' ಮಾಸಪತ್ರಿಕೆಯ ಮೂಲಕ ಶುಭಾರಂಭಗೊಂಡ ಪರಿಷತ್‌ನ ಚಟುವಟಿಕೆ ಇಂದು ರಾಷ್ಟ್ರೀಯ ವಿಚಾರಧಾರೆಯ ಪುಸ್ತಕ ಪ್ರಕಾಶನ; ಸಾಮಾಜಿಕ–ಸಾಂಸ್ಕೃತಿಕ ವಿಕಾಸದ ಗುರಿಹೊತ್ತ ರಾಷ್ಟ್ರೋತ್ಥಾನ ಬಳಗಗಳು; ಸುಸಂಪನ್ನ ದೇಶಭಕ್ತ ಶಿಕ್ಷಿತ ಸಮಾಜ ರೂಪಿಸುವ ಶಿಕ್ಷಣಸಂಸ್ಥೆಗಳು ಹಾಗೂ ಸಂವಿತ್; ಬಡತನದಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ, ಉಚಿತವಾಗಿ ದೇಶದ ಪ್ರತಿಷ್ಠಿತ ಶಿಕ್ಷಣಕ್ಕೆ ತರಬೇತಿ ನೀಡುವ 'ತಪಸ್' ಹಾಗೂ 'ಸಾಧನಾ' ಶೈಕ್ಷಣಿಕ ಯೋಜನೆಗಳು; ಸೇವಾಬಸ್ತಿ (ಸ್ಲಂ, ಕೊಳೆಗೇರಿ)ಗಳ ವಿಕಾಸಕ್ಕಾಗಿ ಶ್ರಮಿಸುವ ವ್ಯಾಸಂಗ/ಕಂಪ್ಯೂಟರ್/ವೃತ್ತಿತರಬೇತಿ ಕೇಂದ್ರಗಳು; ಅಗತ್ಯ ಪಲಾನುಭವಿಗಳಿಗೆ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ರಕ್ತ ಒದಗಿಸುವ ರಕ್ತನಿಧಿಗಳು; ಗುಣಮಟ್ಟದ ರಕ್ತ ಉತ್ಪತ್ತಿಯಾಗದ ನ್ಯೂನತೆ ತಲಸ್ಸೇಮಿಯಾದಿಂದ ಬಳಲುವ ಮಕ್ಕಳಿಗೆ ಸಂಪೂರ್ಣ ಉಚಿತ ಆರೈಕೆ ನೀಡುವ 'ಸಂರಕ್ಷಾ'; ಆರೋಗ್ಯವಂತ ಸಶಕ್ತ ವ್ಯಕ್ತಿಗಳನ್ನು ರೂಪಿಸುವ ಯೋಗಕೇಂದ್ರಗಳು; ಅವಕಾಶವಂಚಿತ, ಪೋಷಕರಹಿತ ಮಕ್ಕಳ ರಕ್ಷಣೆಗೆ ನಿಂತಿರುವ ನಂದಗೋಕುಲ; ದೇಸೀ ಗೋ–ಸಂತತಿಗಳ ರಕ್ಷಣೆಗೆ ಪಣತೊಟ್ಟ ಗೋಶಾಲೆ; – ಹೀಗೆ ಸೇವೆಯ ಜಗತ್ತನ್ನು life's mission ಆಗಿ ಸ್ವೀಕರಿಸಿರುವ ರಾಷ್ಟ್ರೋತ್ಥಾನ ಪರಿಷತ್ ಇಂದು ಅನೇಕ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ರಾಜ್ಯಾದ್ಯಂತ ವ್ಯಾಪಿಸಿದೆ.

ನಮ್ಮ ಕಾರ್ಯಚಟುವಟಿಕೆಯನ್ನು ಗಮನಿಸಿದ ಪೂಜ್ಯ ಶ್ರೀ ವೀರೇಶಾನಂದ ಸ್ವಾಮಿಜೀ ಅವರು, "ರಾಷ್ಟ್ರೋತ್ಥಾನ ಪರಿಷತ್ ಅಂತಾರಾಷ್ಟ್ರೀಯ ಮಟ್ಟದ ಸೇವೆ ಮಾಡುತ್ತಿದೆ" ಎಂದು ಹಾರೈಸಿದ್ದರು. ಹೀಗೆ ನಾಡಿನ ಮಠಾಧೀಶರು, ಖ್ಯಾತಸಾಹಿತಿಗಳು, ಶಿಕ್ಷಣ ತಜ್ಞರು, ಚಿಂತಕರು, ಪತ್ರಕರ್ತರು, ಅಧಿಕಾರಿಗಳು, ಉದ್ಯಮಿಗಳು ನಮ್ಮನ್ನು ಹರಸಿದ್ದಾರೆ. 'ನ್ಯಗ್ರೋಧಬೀಜಂ ಕಿಲಂ ಸಿಡಿದುಂ ಪೆರ್ಮರವಾಗದೇ' ಎಂದ ಹಾಗೆ ಮೊದಲಿಗೆ ಕಂಡೂ ಕಾಣದ ಹಾಗೆ ಇರುವ ಬೀಜದಿಂದ ಮೊಳೆತು ಹರಡುವ ಆಲದ ಮರ ಎಷ್ಟು ವಿಶಾಲವಾಗಿ ಬಿಡುತ್ತದೆಂದರೆ ಅದೇ ಒಂದು ಪ್ರಪಂಚ ಎನಿಸಿಬಿಡುವಂತಾಗಿದೆ. ಇದಕ್ಕೆ ನೈಜ ಉದಾಹರಣೆ ರಾಷ್ಟ್ರೋತ್ಥಾನ ಪರಿಷತ್ – ಎಂದು ಹರಸಿದವರೂ ಹಲವರು.

ರಾಷ್ಟ್ರೋತ್ಥಾನ ಪರಿಷತ್ 2020–21ರ ಆರ್ಥಿಕ ವರ್ಷದಲ್ಲಿ ನಡೆಸಿದ ಪ್ರಮುಖ ಚಟುವಟಿಕೆಗಳ ಒಂದು ಹಿನ್ನೋಟ ಇಲ್ಲಿದೆ. ಮ್ಯಾಗ್ನೆಟ್ (magnet) ಗಾತ್ರದಲ್ಲಿ ನಾಲ್ಕೋ ಆರೋ ಅಂಗುಲ ಅಷ್ಟೇ ಇರಬಹುದು. ಆದರೆ ಅದರ magnetic field ನಾಲ್ಕೈದು ಅಡಿಗಳಷ್ಟು ಇರುತ್ತದೆ. ಅಂತೆಯೇ ಸಮಾಜದಲ್ಲಿನ ಅನೇಕ ಸವಾಲುಗಳ ನಡುವೆ ನಾವೊಂದು ಕಿರು ಹಣತೆಯನ್ನು ಬೆಳಗಿಸುವ ಪ್ರಯತ್ನ ಮಾಡಿದ್ದೇವೆ ಎಂಬುದು ನಮ್ಮ ನಂಬಿಕೆ.

ಬನ್ನಿ... ಜೊತೆಗೂಡಿ ಸಾಗೋಣ...

**ನಾ. ದಿನೇಶ್ ಹೆಗ್ಡೆ**
ಪ್ರಧಾನ ಕಾರ್ಯದರ್ಶಿ

# ವಿಷಯ ಸೂಚಿ

3 ಜಾಗರಣ
10 ನಂದಗೋಕುಲ
12 ಆರೋಗ್ಯಸೇವಾ ಕೇಂದ್ರ
18 ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ
22 ಗೋಶಾಲೆ
25 ಶೈಕ್ಷಣಿಕ ಸಂಸ್ಥೆಗಳು
31 ತಪಸ್ ಮತ್ತು ಸಾಧನಾ



ಬೆಂಗಳೂರು ಒಂದೆಡೆ ಜಗದ್ವಿಖ್ಯಾತಿ ಗಳಿಸುತ್ತಿದೆ. ಇನ್ನೊಂದೆಡೆ ಮೂಲಭೂತ ಸೌಕರ್ಯಗಳ ಕೊರತೆಗಳಿಂದ ವಂಚಿತರಾಗಿರುವ 800ಕ್ಕೂ ಹೆಚ್ಚು ಸೇವಾಬಸ್ತಿ (ಸ್ಲಂ, ಕೊಳೆಗೇರಿ)ಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿವೆ. ಇಂತಹ ಸೇವಾಬಸ್ತಿಗಳಲ್ಲಿ ಆರ್ಥಿಕ ಸಾಮಾಜಿಕ ಕಾರಣಗಳಿಂದಾಗಿ ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ತೆರೆಯುವ ಉದ್ದೇಶದಿಂದ ಜಾಗರಣಪ್ರಕಲ್ಪವು 1989ರಲ್ಲಿ ಪ್ರಾರಂಭವಾಯಿತು.

1989ರಿಂದ 2007ರವರೆಗೆ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ನಡೆಸಿ ಸೇವಾಬಸ್ತಿಯ ಮಕ್ಕಳನ್ನು ಮುಖ್ಯವಾಹಿನಿಯಾದ ಶಾಲೆಗೆ ಸೇರಿಸುವ ಪ್ರಯತ್ನದಲ್ಲಿ ಯಶಕಂಡ ನಂತರ, ಇಂದು ಸೇವಾಬಸ್ತಿಯ ಸಂಪೂರ್ಣ ವಿಕಾಸಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್ ಜಾಗರಣ ಪ್ರಕಲ್ಪದ ಹೆಸರಿನಲ್ಲಿ ವಿವಿಧ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ಶಿಕ್ಷಣ, ಆರೋಗ್ಯ, ಸ್ವಾವಲಂಬನೆ ಮತ್ತು ಸಂಸ್ಕಾರ – ಈ ನಾಲ್ಕು ಆಯಾಮಗಳಲ್ಲಿ 'ಜಾಗರಣ' ಪ್ರಕಲ್ಪವು ಕಳೆದ ಎರಡೂವರೆ ದಶಕಗಳಿಂದ ಬೆಂಗಳೂರಿನ ಸೇವಾಬಸ್ತಿಗಳಲ್ಲಿ ವಿವಿಧ ಸೇವಾಚಟುವಟಿಕೆಗಳನ್ನು ನಡೆಸುತ್ತಿದೆ. ಈ ಚಟುವಟಿಕೆಗಳ ಮೂಲಕ ಸೇವಾಬಸ್ತಿಯ ಸಾವಿರಾರು ಮಕ್ಕಳು, ನೂರಾರು ಮಹಿಳೆಯರು ಹಾಗೂ ಯುವಕ–ಯುವತಿಯರು ಸ್ವಾವಲಂಬೀ ಜೀವನ ರೂಪಿಸಿಕೊಂಡಿದ್ದಾರೆ. ಸೇವಾಬಸ್ತಿಯು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಸೇರಿದಂತೆ ಎಲ್ಲ ಮುಖಗಳಲ್ಲಿಯೂ ಪ್ರಗತಿ ಸಾಧಿಸುತ್ತಿರುವುದನ್ನು ಕಾಣಬಹುದಾಗಿದೆ.



ಕೊರೋನಾ ಮಹಾಮಾರಿಯಿಂದಾಗಿ ಸ್ಥಗಿತಗೊಂಡಂತಿದ್ದ ಸೇವಾಬಸ್ತಿಯ ಚಟುವಟಿಕೆಗಳಿಗೆ ಅಕ್ಟೋಬರ್ ವೇಳೆಗೆ ಇನ್ನಷ್ಟು ವೇಗ ನೀಡಲಾಯಿತು.

**ಈ ವರ್ಷ ಒಟ್ಟು 170 ಸೇವಾಬಸ್ತಿಗಳಲ್ಲಿ 398 ಚಟುವಟಿಕೆಗಳು ನಡೆದವು.**

| | |
|---|---|
| ವ್ಯಾಸಂಗ ಕೇಂದ್ರಗಳು | 200 |
| ಶಿಶುಮಂದಿರ | 1 |
| ಬಾಲಗೋಕುಲ | 170 |
| ಅನೌಪಚಾರಿಕ ಶಿಕ್ಷಣ ಕೇಂದ್ರ | 1 |
| ದೇವಸ್ಥಾನ ಕೇಂದ್ರಿತ ಚಟುವಟಿಕೆ | 1 |
| ಕಂಪ್ಯೂಟರ್ ತರಬೇತಿ | 1 |
| ಹೊಲಿಗೆ ತರಬೇತಿ | 2 |
| ಉಚಿತ ಚಿಕಿತ್ಸಾಲಯ | 2 |
| ಸ್ವಸಹಾಯ ಸಂಘಗಳು | 20 |

## ಶಿಕ್ಷಣ

### ಅ) ವ್ಯಾಸಂಗ ಕೇಂದ್ರಗಳು

ಸೇವಾಬಸ್ತಿಯಲ್ಲಿರುವ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುವಂತಾಗಲು ಹಾಗೂ ಶಿಕ್ಷಣದ ಜೊತೆಜೊತೆಗೆ ಸಂಸ್ಕಾರ, ಸಾಮಾಜಿಕ ಜ್ಞಾನ–ಹೊಣೆಗಾರಿಕೆಯ ಅರಿವನ್ನು ಮೂಡಿಸುವ ದೃಷ್ಟಿಯಿಂದ ವ್ಯಾಸಂಗ ಕೇಂದ್ರಗಳು (Tuition Center) ಕಾರ್ಯನಿರ್ವಹಿಸುತ್ತಿವೆ.

**ಸೇವಾಬಸ್ತಿಯ ಶಿಕ್ಷಿತ ಯುವತಿಯರೇ ಶಿಕ್ಷಕಿಯರು! :** ವ್ಯಾಸಂಗ ಕೇಂದ್ರಗಳಿಗೆ ಅಗತ್ಯ ಶಿಕ್ಷಕಿಯರನ್ನು ಸೇವಾಬಸ್ತಿಯ ವಿದ್ಯಾವಂತ ಹೆಣ್ಣುಮಕ್ಕಳನ್ನು ಜೋಡಿಸಿಕೊಳ್ಳಬೇಕು, ತನ್ಮೂಲಕ ಅಲ್ಲಿನ ಮಹಿಳೆಯರ ಬದುಕಿಗೆ ಆಸರೆಯಾಗಬೇಕು ಎಂಬ ಆಶಯದಿಂದ ಸೇವಾಬಸ್ತಿಯಲ್ಲಿರುವ 10 ಮತ್ತು ಮೇಲ್ಪಟ್ಟ ತರಗತಿಗಳಲ್ಲಿ ಓದುತ್ತಿರುವ ಮತ್ತು ಓದುಮುಗಿಸಿರುವ ಹೆಣ್ಣುಮಕ್ಕಳನ್ನು ಶಿಕ್ಷಕಿಯರನ್ನಾಗಿ ನೇಮಿಸಿಕೊಳ್ಳಲಾಗುತ್ತಿದೆ. ಸೇವಾಬಸ್ತಿಯಲ್ಲಿಯೇ ವಾಸವಾಗಿರುವ

ಇಂತಹ ಹೆಣ್ಣುಮಕ್ಕಳನ್ನು ಗುರುತಿಸಿ, ಸೂಕ್ತ ತರಬೇತಿ ನೀಡಿ 'ಶಿಕ್ಷಕಿ'ಯರನ್ನಾಗಿ ಆಯ್ಕೆ ಮಾಡಲಾಗುತ್ತದೆ. ಇವರಿಗೆ ಪ್ರತೀ ತಿಂಗಳು ತರಬೇತಿ ನೀಡಲಾಗುತ್ತದೆ.

ಈ ಶಿಕ್ಷಕಿಯರು ತಮ್ಮ ಮನೆಯ ಸುತ್ತಮುತ್ತ ಶಾಲೆಗೆ ಹೋಗುತ್ತಿರುವ 15ಕ್ಕೂ ಅಧಿಕ ಮಕ್ಕಳನ್ನು ಜೋಡಿಸಿಕೊಂಡು, ಆ ಮಕ್ಕಳಿಗೆ ಪ್ರತಿದಿನ 21/2 ಗಂಟೆಗಳ ಕಾಲ ಕೋಚಿಂಗ್ (Tuition) ನೀಡುತ್ತಾರೆ. ನಿಃಶುಲ್ಕವಾಗಿ ಕೋಚಿಂಗ್ ಪಡೆಯುವ ಸೇವಾಬಸ್ತಿಯ ಈ ವಿದ್ಯಾರ್ಥಿಗಳು ಶಾಲೆಯಲ್ಲಿ ಹಾಗೂ ಅಧ್ಯಯನದ ಸಮಯದಲ್ಲಿ ಎದುರಾದ ಗೊಂದಲಗಳಿಗೆ ಇಲ್ಲಿನ ಶಿಕ್ಷಕಿಯರಿಂದ ಪರಿಹಾರ ಕಂಡುಕೊಳ್ಳುತ್ತಿದ್ದಾರೆ.

**ವ್ಯಕ್ತಿತ್ವ ವಿಕಾಸಕ್ಕೆ ಒತ್ತು:** ಕೇಂದ್ರದ ಮಕ್ಕಳಿಗೆ ಅಕ್ಕ/ಅಮ್ಮನಂತೆ ಇರುವ ಈ 'ಶಿಕ್ಷಕಿ' ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಯ ಜೊತೆಜೊತೆಗೆ ಅವರಲ್ಲಿ ಒಳ್ಳೆಯ ಮೌಲ್ಯಗಳನ್ನು ಬೆಳೆಸುವ ಪ್ರಯತ್ನ ನಡೆಸುತ್ತಿದ್ದಾರೆ.

**ಯೋಜನಾಬದ್ಧ ಶಿಕ್ಷಣಕ್ರಮ:** ವ್ಯಾಸಂಗ ಕೇಂದ್ರವು ವ್ಯವಸ್ಥಿತ ರೂಪದಲ್ಲಿ ನಡೆಯಲು ಮೇ ತಿಂಗಳಿನಲ್ಲಿ ವಾರ್ಷಿಕ ಯೋಜನೆಯನ್ನು ತಯಾರಿಸಲಾಗುತ್ತದೆ. ಈ ಯೋಜನೆಯಲ್ಲಿ ಪಾಠ್ಯ ಚಟುವಟಿಕೆಗಳು, ಸಂಸ್ಕಾರ ಶಿಕ್ಷಣ ಹಾಗೂ ಉತ್ಸವಗಳ ಆಚರಣೆ ಸೇರಿದಂತೆ ಅನೇಕ ವಿಷಯಗಳು ಅಡಕವಾಗಿರುತ್ತವೆ. ಇವುಗಳನ್ನು ಕಾರ್ಯಗತಗೊಳಿಸಲು ಹಾಗೂ ಶಿಕ್ಷಕಿಯರ ಸಾಮರ್ಥ್ಯವರ್ಧನೆಗಾಗಿ ನಿರಂತರ ಮಾಸಿಕ ಪ್ರಶಿಕ್ಷಣ ವರ್ಗಗಳನ್ನು ನಡೆಸಲಾಗುತ್ತಿದೆ.

**ಎಲ್ಲಿ ನಡೆಯುತ್ತವೆ? :** ಬಹುತೇಕ ವ್ಯಾಸಂಗ ಕೇಂದ್ರಗಳು ಸೇವಾಬಸ್ತಿಯ ವ್ಯಾಸಂಗ ಕೇಂದ್ರದ ಶಿಕ್ಷಕಿಯರ ಮನೆಗಳಲ್ಲಿ ಅಥವಾ ಅಂಗನವಾಡಿಗಳಲ್ಲಿ ನಡೆಯುತ್ತಿವೆ. ಬೆಂಗಳೂರಿನ ಕೆಂಪಾಪುರ ಅಗ್ರಹಾರ, ವಿ.ವಿ. ಗಿರಿ ಕಾಲೊನಿ, ಬೈಯ್ಯಪ್ಪನಹಳ್ಳಿ, ನ್ಯೂ ಗುರಪ್ಪನಪಾಳ್ಯ ಮತ್ತು ದೊಮ್ಮಲೂರು ಸೇವಾಬಸ್ತಿಗಳಲ್ಲಿ ಸ್ವಂತ ಕಟ್ಟಡವಿದೆ. ಇಲ್ಲಿ ವ್ಯಾಸಂಗ ಕೇಂದ್ರದ ಜೊತೆಗೆ ಚಿಕಿತ್ಸಾಲಯ, ಹೊಲಿಗೆ ಹಾಗೂ ಕಂಪ್ಯೂಟರ್ ತರಬೇತಿ, ಶಿಶುಮಂದಿರ ಇತ್ಯಾದಿ ಸೇವಾಚಟುವಟಿಕೆಗಳನ್ನು (ಬೆಳಗ್ಗೆಯಿಂದ ಸಂಜೆಯವರೆಗೆ) ನಡೆಸಲಾಗುತ್ತಿದೆ. ಸ್ಥಾನೀಯ ಜನರಿಗೆ 'ಸೇವಾಧಾಮ' ಎಂದು ಪರಿಚಿತವಾಗಿರುವ ಇವುಗಳಿಂದ ಕೊರೋನಾ ಪೂರ್ವದಲ್ಲಿ ದಿನನಿತ್ಯ 350ಕ್ಕೂ ಹೆಚ್ಚು ಜನರು ಸೇವೆಯನ್ನು ಪಡೆಯುತ್ತಿದ್ದರು.

**ಸಂವಹನಕ್ಕಾಗಿ ಮೇಲ್ವಿಚಾರಕರು:** ವ್ಯಾಸಂಗಕೇಂದ್ರದ ಶಿಕ್ಷಕಿಯರ ಜೊತೆ ನಿರಂತರ ಸಂಪರ್ಕ ಏರ್ಪಡಿಸುವ ಉದ್ದೇಶದಿಂದ ಮೇಲ್ವಿಚಾರಕರನ್ನು ನೇಮಿಸಲಾಗುತ್ತದೆ.

**ಸೇವಾಬಸ್ತಿಯಲ್ಲಿ (ಸ್ಲಂ, ಕೊಳಚೆಗೇರಿ) ವಾಸಿಸುತ್ತಿರುವ ಮಕ್ಕಳನ್ನು ಶೈಕ್ಷಣಿಕವಾಗಿ ಮುನ್ನೆಲೆಗೆ ತರುವ ಪ್ರಯತ್ನವಾಗಿ 'ವ್ಯಾಸಂಗ ಕೇಂದ್ರ'ಗಳನ್ನು ನಡೆಸಲಾಗುತ್ತಿದೆ. ಈ ವ್ಯಾಸಂಗ ಕೇಂದ್ರಗಳನ್ನು ಕೇಂದ್ರವಾಗಿರಿಸಿಕೊಂಡು ಸಂಪೂರ್ಣ ಸೇವಾಬಸ್ತಿಯ ಜೀವನಮಟ್ಟವನ್ನು ಸುಧಾರಿಸುವ ವಿವಿಧ ರೀತಿಯ ಪ್ರಯತ್ನಗಳು ನಡೆಯುತ್ತಿವೆ.**

ಹಲವು ವರ್ಷಗಳ ಕಾಲ ವ್ಯಾಸಂಗಕೇಂದ್ರದ ಶಿಕ್ಷಕಿಯರಾಗಿ ಕಾರ್ಯನಿರ್ವಹಿಸಿದ ಆಯ್ದ ಅನುಭವಿ ಶಿಕ್ಷಕಿಯರನ್ನು ಮೇಲ್ವಿಚಾರಕರನ್ನಾಗಿ ಆಯ್ಕೆ ಮಾಡಲಾಗುತ್ತದೆ. ಇಂತಹ ಮೇಲ್ವಿಚಾರಕರು 6 ರಿಂದ 8 ಸೇವಾಬಸ್ತಿಗಳ ಸೇವಾಚಟುವಟಿಕೆಗಳನ್ನು ಗಮನಿಸುತ್ತಾರೆ.

**ಅಂಕಿ–ಅಂಶಗಳು:** 2020–21ರ ಶೈಕ್ಷಣಿಕ ವರ್ಷದಲ್ಲಿ

- ಕೊರೋನಾ ಕಾರಣದಿಂದಾಗಿ ಅಕ್ಟೋಬರ್ ನಂತರ ವ್ಯಾಸಂಗಕೇಂದ್ರಗಳು ಪ್ರಾರಂಭಿಸಲಾಯಿತು.
- ಬೆಂಗಳೂರಿನ 170 ಸೇವಾಬಸ್ತಿಗಳಲ್ಲಿ 200 ವ್ಯಾಸಂಗ ಕೇಂದ್ರಗಳನ್ನು ನಡೆಸಲಾಯಿತು.
- ಒಟ್ಟು ಶಿಕ್ಷಕಿಯರು ಹಾಗೂ ಮೇಲ್ವಿಚಾರಕರು ಸೇರಿದಂತೆ 200 ಮಂದಿ ಕಾರ್ಯನಿರ್ವಹಿಸಿದರು.
- ಈ ವರ್ಷ 3,000ಕ್ಕೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಕೇಂದ್ರದ ಪ್ರಯೋಜನ ಪಡೆದರು.

**ಎಸ್‌ಎಸ್‌ಎಲ್‌ಸಿ ಫಲಿತಾಂಶ:** ಈ ಶೈಕ್ಷಣಿಕ ಸಾಲಿನಲ್ಲಿ ಸೇವಾಬಸ್ತಿಯ ವ್ಯಾಸಂಗ ಕೇಂದ್ರದಲ್ಲಿ ಕಲಿತ 29 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಕ್ಷರಸ್ಥ ಪೋಷಕರು, ಓದಿಗೆ ಪೂರಕವಾಗದ ಮನೆಯ ವಾತಾವರಣದ ನಡುವೆ 3 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಮತ್ತು 18 ಮಂದಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾದರು. ಇವರಲ್ಲಿ ಹಲವು ವಿದ್ಯಾರ್ಥಿಗಳು ಮನೆಯ ಕೆಲಸ ಮುಂತಾದ ಕೆಲಸಗಳನ್ನು ಮಾಡುತ್ತಾ ಜೊತೆಜೊತೆಗೆ ಶಾಲೆಗೆ ಹೋಗುತ್ತಿದ್ದರು.

# ಸ್ವಾವಲಂಬನೆ

ಸೇವಾಬಸ್ತಿಯಲ್ಲಿರುವ ಮಹಿಳೆಯರ, ಯುವಕ–ಯುವತಿಯರ ಕೈಗಳಿಗೆ ವೃತ್ತಿಪರ ತರಬೇತಿ ನೀಡಿ ಸ್ವಾವಲಂಬೀ ಬದುಕನ್ನು ಕಟ್ಟಿಕೊಡುವ ಉದ್ದೇಶದಿಂದ ವಿವಿಧ ವೃತ್ತಿ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.

**ಅ) ಹೊಲಿಗೆ ತರಬೇತಿ ಕೇಂದ್ರ:** ಕೆ.ಪಿ. ಅಗ್ರಹಾರ ಮತ್ತು ವಿ.ವಿ. ಗಿರಿ ಕಾಲೋನಿ ಸೇವಾಬಸ್ತಿಯಲ್ಲಿ ಒಟ್ಟು 2 ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಈವರೆಗೆ ಒಟ್ಟು 750ಕ್ಕೂ ಅಧಿಕ ಮಹಿಳೆಯರು ತರಬೇತಿ ಪಡೆದಿದ್ದಾರೆ. 2020–21ರಲ್ಲಿ ಒಟ್ಟು 48 ಮಹಿಳೆಯರು ಹೊಲಿಗೆ ತರಬೇತಿ ಪಡೆದಿದ್ದಾರೆ.

**ಆ) ಕಂಪ್ಯೂಟರ್ ತರಬೇತಿ ಕೇಂದ್ರ:** ಅಕಾರ್ಡ್ ಸಾಫ್ಟ್‌ವೇರ್ ಕಂಪೆನಿಯ ಸಹಯೋಗದಲ್ಲಿ ದೊಮ್ಮಲೂರಿನಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. 3 ತಿಂಗಳ ಅವಧಿಯ ಕೋರ್ಸ್‌ಗಳಲ್ಲಿ ಬೇಸಿಕ್ ಮತ್ತು ಟ್ಯಾಲಿ ವಿಷಯಗಳನ್ನು ಕಲಿಸಿ, ನಂತರ ವಿವಿಧ ಕಂಪೆನಿಗಳಲ್ಲಿ ಉದ್ಯೋಗ ಒದಗಿಸಲು ಸಹಾಯ ಮಾಡುವ ಮೂಲಕ ಯುವಕ–ಯುವತಿಯರಿಗೆ ಸ್ವಾವಲಂಬೀ ಬದುಕನ್ನು ಕಟ್ಟಿಕೊಳ್ಳಲು ನೆರವು ನೀಡಲಾಗುತ್ತಿದೆ.

2020–21ನೇ ಸಾಲಿನಲ್ಲಿ 63 ಯುವಕ–ಯುವತಿಯರು ಕಂಪ್ಯೂಟರ್ ತರಬೇತಿ ಪಡೆದಿದ್ದಾರೆ.

**ಇ) ಸ್ವಸಹಾಯ ಸಂಘಗಳು:** ಸಂಪೂರ್ಣ ಸೇವಾಬಸ್ತಿಯ ವಿಕಾಸ ಹಾಗೂ ಸೇವಾಬಸ್ತಿಯ ಜನರ ಆರ್ಥಿಕ ಪ್ರಗತಿ ಸಾಧಿಸುವ ಸಲುವಾಗಿ 14 ಸೇವಾಬಸ್ತಿಗಳಲ್ಲಿ 20 ಸ್ವಸಹಾಯ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಈ ಸ್ವಸಹಾಯ ಸಂಘದ ಮೂಲಕ ಒಟ್ಟು 250ಕ್ಕೂ ಅಧಿಕ ಮಂದಿ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ.

**ಈ) ದೀಪಪೂಜೆ:** ಕಮಲಾನಗರ ಮತ್ತು ಲಗ್ಗೆರೆ ಸ್ವಸಹಾಯ ಸಂಘಗಳ ಸದಸ್ಯರಿಂದ ಸ್ಥಳೀಯ ಗಣಪತಿ ದೇವಸ್ಥಾನದಲ್ಲಿ ಡಿ. 7ರಂದು ದೀಪಪೂಜೆ ಕಾರ್ಯಕ್ರಮ ನಡೆಯಿತು. 9 ಸ್ವಸಹಾಯ ಸಂಘಗಳ 123 ಮಂದಿ ಭಾಗವಹಿಸಿದರು. ಎಲ್ಲರಿಗೂ ಹಿತ್ತಾಳೆ ದೀಪವನ್ನು ಉಚಿತವಾಗಿ ವಿತರಿಸಲಾಯಿತು. ದೇವಸ್ಥಾನದ ಟ್ರಸ್ಟಿಗಳು ಉಪಸ್ಥಿತರಿದ್ದರು.

# ಆರೋಗ್ಯ

## ಅ) ಆರೋಗ್ಯ ರಕ್ಷಕಿಯರು

ಸೇವಾಬಸ್ತಿಗಳ ಮಹಿಳೆಯರಿಗೆ ತಮ್ಮ ವೈಯಕ್ತಿಕ ಆರೋಗ್ಯದ ಸಮಸ್ಯೆಗಳನ್ನು ಹೇಳಿಕೊಳ್ಳಲು ಯಾರೂ ಇರುವುದಿಲ್ಲ. ಆರೋಗ್ಯದ ಸಮಸ್ಯೆ ಉಂಟಾದಾಗ ಎಲ್ಲಿಗೆ ಹೋಗಬೇಕು ಎಂಬ ಅರಿವೂ ಅವರಿಗೆ ತಿಳಿದಿರುವುದಿಲ್ಲ. ಇಂತಹವರಿಗೆ ನೆರವಾಗುವ ಉದ್ದೇಶದಿಂದ ಜಾಗರಣ ಪ್ರಕಲ್ಪವು ಸೇವಾಬಸ್ತಿಯಲ್ಲಿರುವ ಆಸಕ್ತ ಮಹಿಳೆಯನ್ನು 'ಆರೋಗ್ಯ ರಕ್ಷಕಿ'ಯಾಗಿ ಗುರುತಿಸಲಾಗುತ್ತಿದೆ. ಈ ಆರೋಗ್ಯ ರಕ್ಷಕಿಯರು ಅವರಿಗೆ ಸಹಾಯ ಮಾಡುತ್ತಾರೆ. ಹತ್ತಿರದ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಿ ಸೂಕ್ತ ಚಿಕಿತ್ಸೆ ಒದಗಿಸುತ್ತಾರೆ.

- ಸೇವಾಬಸ್ತಿಗಳಲ್ಲಿ ಆರೋಗ್ಯ ಜಾಗೃತಿ, ಆರೋಗ್ಯ ತಪಾಸಣಾ ಶಿಬಿರ, ಗಂಭೀರ ಕಾಯಿಲೆಗಳಿಗೆ ಹೆಚ್ಚಿನ ಚಿಕಿತ್ಸೆಯ ನೆರವು ದೊರಕಿಸುವ ಮತ್ತು ಮಾನಸಿಕವಾಗಿ ನೊಂದಿರುವವರಿಗೆ ಆಪ್ತಸಲಹೆ ನೀಡುವ ವಿವಿಧ ಚಟುವಟಿಕೆಗಳನ್ನು ಆರೋಗ್ಯ ರಕ್ಷಕಿಯರು ನಡೆಸುತ್ತಿದ್ದಾರೆ.
- ಅನೇಕ ಬಡ ಗರ್ಭಿಣಿ ಹೆಂಗಸರು ಇವರ ಸಹಾಯದಿಂದ ಉತ್ತಮ ಆಸ್ಪತ್ರೆಗಳಲ್ಲಿ ಉಚಿತ ಹೆರಿಗೆ ಸೌಲಭ್ಯವನ್ನು ಪಡೆದಿದ್ದಾರೆ.
- ಈವರೆಗೆ ಸಾವಿರಾರು ಮಹಿಳೆಯರು ತಮ್ಮ ಆರೋಗ್ಯದ ಸಮಸ್ಯೆಗಳನ್ನು ಇವರ ಮುಂದೆ ಹಂಚಿಕೊಂಡು ಪರಿಹರಿಸಿಕೊಂಡಿದ್ದಾರೆ. ಸಮಾಧಾನ ಪಟ್ಟಿದ್ದಾರೆ. ಇವರ ಮೂಲಕ ಸೇವಾಬಸ್ತಿಯ ಮನೆಗಳ ಸರ್ವೇಕ್ಷಣೆ ನಡೆಸಿ ಅನಾರೋಗ್ಯದ ಕಾರಣವನ್ನು ಪತ್ತೆ ಹಚ್ಚಲಾಗುತ್ತಿದೆ. ನಿರಂತರವಾಗಿ ವಿವಿಧ



ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಲಾಗುತ್ತಿದೆ. ಅನಾರೋಗ್ಯಕ್ಕೆ ಕಾರಣವಾದ ಅನೈರ್ಮಲ್ಯ ವಾತಾವರಣವನ್ನು ದೂರಗೊಳಿಸಲು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

- ಪ್ರಸ್ತುತ ಕೆ.ಪಿ. ಅಗ್ರಹಾರದ ಸುತ್ತಲಿನ 5 ಸೇವಾಬಸ್ತಿಗಳಲ್ಲಿ ಹಾಗೂ ಸಿದ್ಧಾಪುರ ಸುತ್ತಲಿನ 6 ಸೇವಾಬಸ್ತಿಗಳ ಆರೋಗ್ಯ ರಕ್ಷಕಿಯರು ಶ್ರಮಿಸುತ್ತಿದ್ದಾರೆ.
- ಈ ವರ್ಷ ಗಂಭೀರ ಕೊರೋನಾ ಸಂದರ್ಭದಲ್ಲಿ ಜನಜಾಗೃತಿ ಹಾಗೂ ಸ್ವಚ್ಛತೆ, ಮಾಸ್ಕ್, ಧರಿಸುವುದರ ಕುರಿತು ಅರಿವು ಮೂಡಿಸಿದರು. ಲಾಕ್‌ಡೌನ್ ಸಂದರ್ಭದಲ್ಲಿ ಬಡ ಕುಟುಂಬಗಳಿಗೆ ಆಹಾರ ಸಾಮಗ್ರಿಗಳನ್ನು ವಿತರಿಸುವ ಕಾರ್ಯದಲ್ಲಿ ತಮ್ಮನ್ನು ಜೋಡಿಸಿಕೊಂಡರು.
- 180 ಬಡ-ಕುಟುಂಬಗಳಿಗೆ ಆಹಾರ ಸಾಮಗ್ರಿಗಳನ್ನು ವಿತರಿಸಲಾಯಿತು.

### ಆ) ಉಚಿತ ಚಿಕಿತ್ಸಾಲಯ

ಸೇವಾಬಸ್ತಿಯ ಜನರ ಸಾಮಾನ್ಯ ರೋಗಗಳಿಗೆ ಚಿಕಿತ್ಸೆ ನೀಡುವ ಸಲುವಾಗಿ ಕೆಂಪಾಪುರ ಅಗ್ರಹಾರ ಮತ್ತು ವಿ.ವಿ. ಗಿರಿ ಸೇವಾಬಸ್ತಿಯಲ್ಲಿ ನಿಯಮಿತವಾಗಿ ಉಚಿತ ಚಿಕಿತ್ಸಾ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಈ ವರ್ಷ ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಸುಮಾರು 50ಕ್ಕೂ ಅಧಿಕ ಮಂದಿ ಇದರ ಪ್ರಯೋಜನ ಪಡೆದಿದ್ದಾರೆ.

### ಇ) ಆರೋಗ್ಯ ಮತ್ತು ನೇತ್ರ ತಪಾಸಣಾ ಶಿಬಿರಗಳು

ಪ್ರತೀ ವರ್ಷ ವಿವಿಧ ಆಸ್ಪತ್ರೆಗಳ, ಸಂಸ್ಥೆಗಳ ಸಹಯೋಗದೊಂದಿಗೆ ಸೇವಾಬಸ್ತಿಗಳಲ್ಲಿ ನಿಯಮಿತವಾಗಿ ಉಚಿತ ಸ್ವಾಸ್ಥ್ಯ ಸಂಬಂಧಿ ಶಿಬಿರಗಳನ್ನು ನಡೆಸಲಾಗುತ್ತಿತ್ತು. ಈ ವರ್ಷ ಕೊರೋನಾ ಕಾರಣಗಳಿಂದ 2021ರ ಫೆಬ್ರುವರಿಯಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಯಿತು.

ನೇತ್ರ ತಪಾಸಣೆ, ಮಹಿಳೆಯರ ಆರೋಗ್ಯ ತಪಾಸಣೆ, ಬಿ.ಪಿ ಮತ್ತು ಮಧುಮೇಹ ಪರೀಕ್ಷೆ, ಹೃದಯ ಸಂಬಂಧಿ ಕಾಯಿಲೆಗಳ ತಪಾಸಣೆಯ ಜೊತೆಗೆ ಸಾಮಾನ್ಯ ಆರೋಗ್ಯ ಸಮಸ್ಯೆಗಳ ಬಗೆಗೆ ತಪಾಸಣೆ ನಡೆಸಲಾಯಿತು. ಕೊರೋನಾ ಜಾಗೃತಿಯ ಜೊತೆ ಸೇವಾಬಸ್ತಿಗಳ ಜನರಿಗೆ ಆರೋಗ್ಯರಕ್ಷಣೆಯ ಅರಿವನ್ನು ಮೂಡಿಸಲಾಯಿತು.

ರೋಟರಿ ರಾಜಾಜಿನಗರ ಮತ್ತು ಸುಮತಿ ಸಂಸ್ಕೃತಿ ಟ್ರಸ್ಟ್ ಸಹಯೋಗದಲ್ಲಿ ನಡೆದ ಈ ಶಿಬಿರದಲ್ಲಿ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಯ ವೈದ್ಯರುಗಳು ತಪಾಸಣೆ ನಡೆಸಿ ಸೂಕ್ತ ಸಲಹೆ ಮತ್ತು ಔಷಧಿ ನೀಡಿದರು.




90 ಮಂದಿ ಮಾತೆಯರು ಸೇರಿದಂತೆ ಒಟ್ಟು 150 ಮಂದಿ ಈ ಶಿಬಿರದ ಪ್ರಯೋಜನ ಪಡೆದರು.

## ಸಂಸ್ಕಾರ

### ಅ) ಬಾಲಗೋಕುಲ

ಬಾಲಗೋಕುಲಗಳ ಮೂಲಕ ಸೇವಾಬಸ್ತಿಯಲ್ಲಿರುವ ಮಕ್ಕಳಲ್ಲಿ ಉತ್ತಮ ಗುಣಗಳನ್ನು ಬೆಳೆಸುವ ಕಾರ್ಯವನ್ನು ನಡೆಸಲಾಗುತ್ತಿದೆ. ಪ್ರಸ್ತುತ 170 ಬಾಲಗೋಕುಲಗಳು ನಡೆಯುತ್ತಿದ್ದು, 3 ಸಾವಿರಕ್ಕೂ ಅಧಿಕ ಮಕ್ಕಳು ಭಾಗವಹಿಸುತ್ತಿದ್ದಾರೆ.

### ಆ) ದೇವಸ್ಥಾನ ಕೇಂದ್ರಿತ ಚಟುವಟಿಕೆ

ಸೇವಾಬಸ್ತಿಯಲ್ಲಿರುವ ದೇವಸ್ಥಾನವನ್ನು ಕೇಂದ್ರಿತವಾಗಿರಿಸಿ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಈ ಮೂಲಕ ಸೇವಾಬಸ್ತಿಯ ಜನರಲ್ಲಿ ಸಂಸ್ಕಾರ ನೀಡುವ ಪ್ರಯತ್ನ ನಡೆಯುತ್ತಿದೆ.

ಬೆಂಗಳೂರಿನ ಕೆಂಪಾಪುರ ಅಗ್ರಹಾರದ ರಾಷ್ಟ್ರೋತ್ಥಾನ ಸೇವಾಧಾಮದಲ್ಲಿರುವ ಶ್ರೀ ಗಣೇಶ ದೇವಸ್ಥಾನದ ಮೂಲಕ ಸುತ್ತಲಿನ ಜನರಿಗೆ ಧಾರ್ಮಿಕ ಭಾವನೆ ಜಾಗೃತಗೊಳಿಸುವ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ.

### ಇ) ಶಿಶುಮಂದಿರ

ಇಲ್ಲಿ ಮಕ್ಕಳಿಗೆ ತಾಯಿಯಂತೆ ಪ್ರೀತಿತೋರುವ ಶಿಕ್ಷಕಿಯರು ಆ ಮಕ್ಕಳಿಗೆ ಊಟದ ಜೊತೆಗೆ ಆಟ, ಹಾಡು ಮುಂತಾದ ಮನೋವಿಕಾಸದ ಚಟುವಟಿಕೆಗಳನ್ನು ನಡೆಸಿಕೊಡುತ್ತಾರೆ. ಕೊರೋನಾ ಕಾರಣದಿಂದ ಪ್ರಸ್ತುತ ಒಂದು ಶಿಶುಮಂದಿರ ಕಾರ್ಯನಿರ್ವಹಿಸುತ್ತಿದೆ.

# ಸೇವಾಬಸ್ತಿಯಲ್ಲಿ ನಡೆಸಿದ ವಿವಿಧ ಕಾರ್ಯಕ್ರಮಗಳು

ಕೊರೋನಾ ಮಹಾಮಾರಿ ಆವರಿಸಿರುವ ಈ ವರ್ಷ ಜಾಗರಣ ಪ್ರಕಲ್ಪವು ವಿಶೇಷವಾಗಿ ಸೇವಾಬಸ್ತಿಯ ಜನರ ಸ್ವಾಸ್ಥ್ಯವನ್ನು ಕಾಪಾಡುವ ದೃಷ್ಟಿಯಿಂದ ವಿವಿಧ ರೀತಿಯ ಚಟುವಟಿಕೆಗಳನ್ನು ನಡೆಸಿದೆ.

- **ಆಹಾರ ಸಾಮಾಗ್ರಿಗಳ ಕಿಟ್ ವಿತರಣೆ:** ಕೊರೋನಾ ತೀವ್ರತೆಯಲ್ಲಿರುವ 2020ರ ಏಪ್ರಿಲ್ ತಿಂಗಳಲ್ಲಿ ಕೆಂಪಾಪುರ ಅಗ್ರಹಾರ, ಬೈಯ್ಯಪ್ಪನಹಳ್ಳಿ, ಸಿದ್ದಾಪುರ, ಮಾರುತಿನಗರ ಮೊದಲಾದ ಸೇವಾಬಸ್ತಿಗಳಲ್ಲಿ ಸಂಕಷ್ಟದಲ್ಲಿರುವ 5,000ಕ್ಕೂ ಹೆಚ್ಚು ಕುಟುಂಬಗಳಿಗೆ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ವಿತರಿಸಲಾಯಿತು.
- **ಹೋಮಿಯೋಪತಿ ಔಷಧಿ ವಿತರಣೆ:** ಸೇವಾಬಸ್ತಿಯ ಜನರಲ್ಲಿ ರೋಗನಿರೋಧಕ ಶಕ್ತಿ ವೃದ್ಧಿಸುವ ಸಲುವಾಗಿ ಬೆಂಗಳೂರಿನ ಪ್ರಸಿದ್ಧ ವೈದ್ಯರಾದ ಡಾ॥ ಮದನ್ ಮತ್ತು ಡಾ॥ ಶ್ರೀಧರ್ ಅವರು ತಯಾರಿಸಿದ ಹೋಮಿಯೋಪತಿ ಔಷಧಿಯನ್ನು ಸೇವಾಬಸ್ತಿಗಳಲ್ಲಿ ಜನರಿಗೆ ಉಚಿತವಾಗಿ ವಿತರಿಸಲಾಯಿತು. ಜಾಗರಣ ಪ್ರಕಲ್ಪದ ಕಾರ್ಯಕರ್ತರು ಏಪ್ರಿಲ್ ತಿಂಗಳಲ್ಲಿ 25,000ಕ್ಕೂ ಹೆಚ್ಚು ಜನರಿಗೆ ಔಷಧಿಯನ್ನು ವಿತರಿಸಿದರು.
- **ಸೇವಾಧಾಮ:** ಬೆಂಗಳೂರಿನ ಮಾಗಡಿ ರಸ್ತೆಯ ಕೆಂಪಾಪುರ ಅಗ್ರಹಾರ ದಲ್ಲಿರುವ 'ರಾಷ್ಟ್ರೋತ್ಥಾನ ಸೇವಾಧಾಮ'ದ ಮೂಲಕ ಕೊರೋನಾ ಸಂಕಷ್ಟ ಕಾಲದಲ್ಲಿ ತೊಂದರೆಯಲ್ಲಿರುವ ಜನರಿಗೆ ನಿರಂತರವಾಗಿ ಆಹಾರ ಸಾಮಾಗ್ರಿ ಮತ್ತು ಹೋಮಿಯೋಪತಿ ಔಷಧಿಯನ್ನು ವಿತರಣೆ ಮಾಡಲಾಯಿತು.

### ವಿಶೇಷ ದಿನಾಚರಣೆಗಳಲ್ಲಿ ಕೊರೋನಾ ಜಾಗೃತಿಗೆ ಆದ್ಯತೆ

- **ಯೋಗ ದಿನಾಚರಣೆ:** ಸೇವಾಬಸ್ತಿಯ ಜನರಲ್ಲಿ ಆರೋಗ್ಯ ಸುಸ್ಥಿರವಾಗಿರಲು ಯೋಗ ಮತ್ತು ಪ್ರಾಣಾಯಾಮದ ನಿರಂತರ ಅಭ್ಯಾಸದ ಆಗತ್ಯವನ್ನು ಕುರಿತು ಜಾಗೃತಿ ಮೂಡಿಸಲಾಯಿತು. ಸಂಪೂರ್ಣ ಜೂನ್ ತಿಂಗಳಲ್ಲಿ ಪ್ರತಿ ದಿನ ತರಬೇತಿಗೊಂಡ ಕಾರ್ಯಕರ್ತರು ಸೇವಾಬಸ್ತಿಯ ಜನರಿಗೆ ಯೋಗ ಮತ್ತು ಪ್ರಾಣಾಯಾಮದ ಅಭ್ಯಾಸ ಮಾಡಿಸಿದರು. ಜೂನ್ 21ರಂದು ವಿವಿಧ ಸೇವಾಬಸ್ತಿಗಳಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ 500ಕ್ಕೂ ಹೆಚ್ಚು ಜನರು ಭಾಗವಹಿಸಿದರು.
- ಗಣೇಶ ಚತುರ್ಥಿಯಂದು ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ಮಾಸ್ಕ್ ವಿತರಣೆ ಕಾರ್ಯಕ್ರಮ ಮತ್ತು ಕೊರೊನಾ ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಯಿತು.



**ಸಂಕ್ರಾಂತಿಯಂದು ಗೋ–ಜಾಗೃತಿ:** ಬೆಂಗಳೂರಿನ ಸೇವಾಬಸ್ತಿಗಳಲ್ಲಿ ತಮಿಳು ಭಾಷಿಕರೇ ಅಧಿಕವಾಗಿರುವುದರಿಂದ ಅಲ್ಲಿ ಸಂಕ್ರಾಂತಿ /ಪೊಂಗಲ್ ಹಬ್ಬ ವಿಶೇಷವಾಗಿದೆ. ಜಾಗರಣ ಪ್ರಕಲ್ಪವು ಈ ಪೊಂಗಲ್ ಹಬ್ಬದಂದು ಗೋಪೂಜೆ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸೇವಾಬಸ್ತಿಯ ಜನರಲ್ಲಿ ಗೋವಿನ ಮಹತ್ತ್ವ, ಶ್ರೇಷ್ಠತೆ ಮತ್ತು ಅದರ ಹಿಂದಿನ ಧಾರ್ಮಿಕತೆಯ ಅರಿವು ಮೂಡಿಸುವ ಪ್ರಯತ್ನವನ್ನು ಕಳೆದ ಹಲವು ವರ್ಷಗಳಿಂದ ಮಾಡಿಕೊಂಡು ಬರಲಾಗುತ್ತಿದೆ.

ಈ ವರ್ಷ ಜನವರಿ 14 ಮತ್ತು 15ರಂದು ಹಲವು ಸೇವಾಬಸ್ತಿಗಳ ಜಾಗರಣ ಪ್ರಕಲ್ಪದ ವ್ಯಾಸಂಗ ಕೇಂದ್ರಗಳಲ್ಲಿ ಗೋಪೂಜೆ ಕಾರ್ಯಕ್ರಮ ನಡೆಯಿತು. ಸೇವಾಬಸ್ತಿಯ ಮಕ್ಕಳು ಮತ್ತು ತಾಯಂದಿರು ಗೋಪೂಜೆ ನೆರವೇರಿಸಿ, ಬೆಲ್ಲ, ಅಕ್ಕಿ, ಕಬ್ಬು, ಬಾಳೆಹಣ್ಣುಗಳನ್ನು ಗೋವಿಗೆ ನೀಡಿದರು.

### ಧಾರ್ಮಿಕ ಜಾಗೃತಿ ಮೂಡಿಸಿದ ಶಿವರಾತ್ರಿ:

- ಸೇವಾಬಸ್ತಿಯ ಧಾರ್ಮಿಕ ಜಾಗೃತಿಗಾಗಿ ಜಾಗರಣ ಪ್ರಕಲ್ಪದ ಕಾರ್ಯಕರ್ತರು ಮಾರ್ಚ್ 11ರಂದು ಸೇವಾಬಸ್ತಿಯ ಮನೆಮನೆಗಳಿಗೆ ತೆರಳಿ 108 ಬಾರಿ ಶಿವನಾಮ ಬರೆದು ಶಿವನಿಗೆ ಅರ್ಪಿಸುವಂತೆ ತಿಳಿಸಿ ಶಿವನಾಮ ಜಪದ ಹಾಳೆಗಳನ್ನು ನೀಡಿದರು.
- ಕನಕಪುರ ರಸ್ತೆಯ ಹರಿಕಾಲೋನಿ, ಪ್ರಗತಿಪುರ ಸೇವಾಬಸ್ತಿಗಳ ವ್ಯಾಸಂಗ ಕೇಂದ್ರಗಳ ವಿದ್ಯಾರ್ಥಿಗಳು ಮಣ್ಣಿನಿಂದ ಶಿವಲಿಂಗ ತಯಾರಿಸಿ ಪೂಜಿಸಿದರು.

**ದೀಪಾವಳಿ:** ಬೆಂಗಳೂರಿನ ಕೆಲ ಸಾಮಾಜಿಕ ಸಂಘಟನೆಗಳ ಯುವಕರು ಕಳೆದ ಹಲವು ವರ್ಷಗಳಿಂದ ದೀಪಾವಳಿ ಉತ್ಸವವನ್ನು ಸೇವಾಬಸ್ತಿಯ ಮಕ್ಕಳ ಜೊತೆ ಆಚರಿಸಿಕೊಂಡು ಬರುತ್ತಿದ್ದಾರೆ. ಈ ಯುವಕರ ತಂಡ ಈ ವರ್ಷ ಕೆ.ಪಿ. ಅಗ್ರಹಾರ, ಬೈಯ್ಯಪ್ಪನಹಳ್ಳಿ, ಆತ್ಮಜ್ಯೋತಿನಗರ ಮೊದಲಾದ ಸೇವಾಬಸ್ತಿಗಳಲ್ಲಿ ಮಕ್ಕಳ ಜೊತೆ ದೀಪಾವಳಿ ಆಚರಿಸಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

**ಭಾರತಮಾತಾ ಪೂಜನ :** ಜನವರಿ 26ರಂದು ವ್ಯಾಸಂಗ ಕೇಂದ್ರಗಳ ಮಕ್ಕಳಿಂದ ಭಾರತಮಾತಾ ಪೂಜನ ಕಾರ್ಯಕ್ರಮ ನಡೆಯಿತು. ಭಾರತಮಾತೆಯ ಚಿತ್ರದ ಮುಂದೆ ದೇಶಭಕ್ತಿ ಗೀತೆಗಳನ್ನು ಹಾಡುವ ಮೂಲಕ ಕಾರ್ಯಕ್ರಮವನ್ನು ಆಚರಿಸಿದರು.

**ಶಿಕ್ಷಕಿಯರ ಪ್ರಶಿಕ್ಷಣ ವರ್ಗ:** ನವೆಂಬರ್ 8ರಂದು ಸೇವಾಬಸ್ತಿಯಲ್ಲಿ ವ್ಯಾಸಂಗ ಕೇಂದ್ರಗಳನ್ನು ನಡೆಸುತ್ತಿರುವ ಶಿಕ್ಷಕಿಯರ ಪ್ರಶಿಕ್ಷಣ ವರ್ಗ ನಡೆಯಿತು. ಸಮಾರೋಪ ಸಮಾರಂಭದಲ್ಲಿ ಆರೆಸ್ಸೆಸ್‌ನ ಕರ್ನಾಟಕ ದಕ್ಷಿಣದ ಪ್ರಾಂತ ಕಾರ್ಯಾಲಯದ ಪ್ರಮುಖರಾದ ಅವಿನಾಶ್ ಅವರು ಆಗಮಿಸಿ ನೈತಿಕ ಮೌಲ್ಯಗಳನ್ನು ಸೇವಾಬಸ್ತಿಯ ಜನರಿಗೆ ನೀಡುವ ಕುರಿತು ತಿಳಿಸಿದರು.

**ಕಾರ್ಯಕರ್ತರ ಅಭ್ಯಾಸ ವರ್ಗ:** ಜಾಗರಣ ಪ್ರಕಲ್ಪದ ಮೇಲ್ವಿಚಾರಕರಿಗಾಗಿ ಮಾರ್ಚ್ 14ರಂದು ಅಭ್ಯಾಸವರ್ಗವನ್ನು ಆಯೋಜಿಸಲಾಯಿತು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ, ಆಡಳಿತ ಮಂಡಳಿ ಸದಸ್ಯ ನಾರಾಯಣ ಅವರು ಮಾರ್ಗದರ್ಶನ ಮಾಡಿದರು.

**ಕಾಲೇಜ್ ವಿದ್ಯಾರ್ಥಿಗಳ ಜೋಡಣೆ:** ಹಲವು ವರ್ಷಗಳಿಂದ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಆಸಕ್ತರನ್ನು ಗುರುತಿಸಿ, ಅವರಿಗೆ ವಿವಿಧ ಕೆಲಸಗಳನ್ನು ನೀಡುವ ಪ್ರಯತ್ನ ನಡೆಸಲಾಗುತ್ತಿದೆ. ಈ ವರ್ಷ ಇಂಜಿನಿಯರ್ ವಿದ್ಯಾರ್ಥಿಯೊಬ್ಬರು ತಮ್ಮ ಬಿಡುವಿನ ಸಮಯವನ್ನು ಸೇವಾಬಸ್ತಿಯ ಮಕ್ಕಳಿಗೆ ಪಾಠ ಮಾಡಲು ಜಾಗರಣ ಪ್ರಕಲ್ಪ ಅವಕಾಶ ಮಾಡಿಕೊಟ್ಟಿದೆ. ಬೆಂಗಳೂರಿನ ಆರ್.ವಿ. ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ರಂಜಿತ್ ಅವರು ವಿದ್ಯಾಪೀಠದ ಸಮೀಪದ ಮಂಜುನಾಥ ಕಾಲೋನಿಯಲ್ಲಿ ನಡೆಯುವ ವ್ಯಾಸಂಗ ಕೇಂದ್ರದಲ್ಲಿ ಪ್ರತಿನಿತ್ಯ ಗಣಿತ ಪಾಠ ಮಾಡುವ ಮೂಲಕ ಸೇವೆ ಸಲ್ಲಿಸುತ್ತಿದ್ದಾರೆ. ಮಕ್ಕಳಿಗೆ ಗಣಿತದ ಮೇಲಿನ ಆಸಕ್ತಿ ಹೆಚ್ಚಿದೆ.



# ನಂದಗೋಕುಲ

ತಂದೆ/ತಾಯಿಯರ ಪಾಲನೆ-ಪೋಷಣೆಯಿಂದ ವಂಚಿತ ಮಕ್ಕಳಿಗೆ ಆಶ್ರಯ ನೀಡುವ ಸಲುವಾಗಿ 'ನಂದಗೋಕುಲ' 2007 ರಿಂದ ಕಾರ್ಯನಿರ್ವಹಿಸುತ್ತಿದೆ.

ದಿವಂಗತ ನಂದಕುಮಾರ್ ಅವರು ದಾನವಾಗಿ ನೀಡಿದ ಬೆಂಗಳೂರಿನ ನಾಗರಭಾವಿಯ ಜಾಗದಲ್ಲಿ 2007ರಲ್ಲಿ ನಂದಗೋಕುಲದ ಚಟುವಟಿಕೆಗಳು ಪ್ರಾರಂಭವಾಯಿತು. ಪ್ರಸ್ತುತ ನಾಗರಬಾವಿ ಮತ್ತು ಬಸವೇಶ್ವರನಗರದ ಕಾಮಾಕ್ಷಿಪಾಳ್ಯದ ರಾಷ್ಟ್ರೋತ್ಥಾನ ಶಿಶುಮಂದಿರ - ಎರಡು ಕಡೆಗಳಲ್ಲಿ ನಂದಗೋಕುಲದ ಚಟುವಟಿಕೆಗಳು ನಡೆಯುತ್ತಿದೆ.



ಧಾರವಾಡ, ಚಾಮರಾಜನಗರ, ತುಮಕೂರು, ಗುಲ್ಬರ್ಗಾ ಸೇರಿ ಹಲವು ಜಿಲ್ಲೆಗಳ ಗ್ರಾಮೀಣ ಭಾಗದ ಒಟ್ಟು 30 ಮಕ್ಕಳು ಇಲ್ಲಿ ಆಶ್ರಯ ಪಡೆದಿದ್ದಾರೆ. ಈ ಮಕ್ಕಳಿಗೆ ಉಚಿತ ಊಟ, ವಸತಿ ಆಂಗ್ಲ ಮಾಧ್ಯಮ ಶಿಕ್ಷಣದ ಜೊತೆಗೆ ಅವರ ಸರ್ವತೋಮುಖ ವಿಕಾಸಕ್ಕಾಗಿ ಹಲವು ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

ಸಾಮಾನ್ಯ ಹಿನ್ನೆಲೆಯ ಈ ಮಕ್ಕಳಲ್ಲಿ ಹಲವರು ಏಕ–ಪೋಷಕರನ್ನು (Single Parent) ಹೊಂದಿದವರಾಗಿದ್ದಾರೆ.

**ನಂದಗೋಕುಲದ ನಾಗರಾಜ್ ತಪಸ್‌ಗೆ ಆಯ್ಕೆ:** ನಂದಗೋಕಲದ 4 ಮಂದಿ ಮಕ್ಕಳು ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದರು. ನಾಗರಾಜ 605 ಅಂಕಗಳನ್ನು ಪಡೆದು, ಸಾಣೆ ಗುರುವನಹಳ್ಳಿ ಸರ್ಕಾರಿ ಶಾಲೆಗೆ ಮೊದಲಿಗನಾಗಿದ್ದಾನೆ. ಜೊತೆಗೆ ರಾಷ್ಟ್ರೋತ್ಥಾನದ ಪ್ರತಿಷ್ಠಿತ ಉಚಿತ ಐಐಟಿ ಶಿಕ್ಷಣ ನೀಡುವ ತಪಸ್ ಯೋಜನೆಗೆ ಆಯ್ಕೆಯಾಗಿದ್ದಾರೆ. ಶಶಾಂಖ್ ನಾಯಕ್ 527 ಅಂಕಗಳನ್ನು, ಧನುಷ್ ಮಡಿವಾಳ 494, ಈರಣ್ಣ ನೇಕಾರ್ 482 ಅಂಕಗಳನ್ನು ಪಡೆದಿದ್ದಾರೆ.

## ಮಕ್ಕಳ ಮನೋವಿಕಾಸಕ್ಕಾಗಿ ನಡೆಸಿದ ಕಾರ್ಯಕ್ರಮಗಳು

- ಮಕ್ಕಳಲ್ಲಿ ಸಾಮೂಹಿಕತೆ, ಸಾಮರಸ್ಯ, ಭಾರತೀಯ ಮೌಲ್ಯಗಳ ಜಾಗರಣೆಗಾಗಿ ಗೌರಿ–ಗಣೇಶ ಹಬ್ಬ, ದೀಪಾವಳಿ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ಸಾಮಾಜಿಕ ಜಾಗೃತಿಗಾಗಿ ಸ್ಥಳೀಯ ಬೀದಿಗಳಲ್ಲಿ ಭಜನೆ ಹಾಗೂ ವಿಸರ್ಜನಾ ಕಾರ್ಯಕ್ರಮ ನಡೆಯಿತು.
- ಹಲವು ಸಂಘಟನೆಗಳ ಕಾರ್ಯಕರ್ತರು ನಂದಗೋಕುಲಕ್ಕೆ ಭೇಟಿ ನೀಡಿ, ಹುಟ್ಟುಹಬ್ಬ ಮುಂತಾದ ವಿಶೇಷ ದಿನಗಳನ್ನು ಇಲ್ಲಿಯ ಮಕ್ಕಳೊಂದಿಗೆ ಆಚರಿಸುತ್ತಿದ್ದಾರೆ.
- **ಮಕ್ಕಳ ಕಲಿಕೆಗೆ ನೆರವಾದ ನಿವೃತ್ತ ಬ್ಯಾಂಕ್ ಅಧಿಕಾರಿ:** ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಅಧಿಕಾರಿಯಾಗಿರುವ ಪುಷ್ಪಾ ಅವರು ತಮ್ಮ ನಿವೃತ್ತ ಜೀವನವನ್ನು ಕಾಮಾಕ್ಷಿಪಾಳ್ಯದ ಅಪಾರ್ಟ್‌ಮೆಂಟ್‌ನಲ್ಲಿ ಕಳೆಯುತ್ತಿದ್ದಾರೆ. ರಾಷ್ಟ್ರೋತ್ಥಾನ ಯೋಗಕೇಂದ್ರಕ್ಕೆ ಯೋಗ ಕಲಿಯಲು ಬರುತ್ತಿದ್ದ ಅವರು ಮಕ್ಕಳ ಶಿಕ್ಷಣದ ಬಗ್ಗೆ ಗಮನ ಕೊಡಲು ಆರಂಭಿಸಿದರು. ಅದರ ಫಲವಾಗಿ ಮಕ್ಕಳ ಇಂಗ್ಲಿಷ್ ಮತ್ತು ಗಣಿತ ವಿಷಯಗಳ ಕಲಿಕಾ ಸಾಮರ್ಥ್ಯ ಹೆಚ್ಚಿತು. ಕೊರೊನಾ ಸಮಯದಲ್ಲಿಯೂ ಅವರು ಮೊಬೈಲ್ ಮೂಲಕ ಮಕ್ಕಳಿಗೆ ಪಾಠ ಮಾಡುತ್ತಿದ್ದರು.



- ಕೇವಲ ಶಿಕ್ಷಣವನ್ನಷ್ಟೆ ಗಮನಿಸದೆ ಮಕ್ಕಳಿಗೆ ಅಗತ್ಯವಿರುವ ಬಟ್ಟೆ, ಪುಸ್ತಕಗಳನ್ನು ನೀಡುತ್ತಿದ್ದಾರೆ.
- ಇದೀಗ ನಾಗರಭಾವಿಯ ನಂದಗೋಕುಲ ಮತ್ತು ಕಾಮಾಕ್ಷಿಪಾಳ್ಯದ ರಾಷ್ಟ್ರೋತ್ಥಾನ ಮಕ್ಕಳ ಮಂದಿರದಲ್ಲಿ ಮಕ್ಕಳು Online Classಗೆ ಹಾಜರಾಗುತ್ತಿದ್ದಾರೆ.

# ಆರೋಗ್ಯಸೇವಾ ಕೇಂದ್ರ



## ರಾಷ್ಟ್ರೋತ್ಥಾನ ರಕ್ತಕೇಂದ್ರ

ರಕ್ತದ ಅಗತ್ಯ ಇರುವವರಿಗೆ ಸಮಯಕ್ಕೆ ಸರಿಯಾಗಿ ರಕ್ತ ಸಿಗಬೇಕು ಮತ್ತು ಯಾವುದೇ ವ್ಯಕ್ತಿ ಬರಿಗೈಯಲ್ಲಿ ಹಿಂದಿರುಗಬಾರದು ಎಂಬ ಸಾಮಾಜಿಕ ಕಳಕಳಿಯಿಂದ ರಾಷ್ಟ್ರೋತ್ಥಾನ ರಕ್ತಕೇಂದ್ರ ಮೇ 30, 1993ರಂದು ಆರಂಭವಾಯಿತು.

## ಅ) ರಾಷ್ಟ್ರೋತ್ಥಾನ ರಕ್ತಕೇಂದ್ರ

'ರಾಷ್ಟ್ರೋತ್ಥಾನ ರಕ್ತಕೇಂದ್ರ' ಮೇ 30, 1993ರಂದು ಪ್ರಾರಂಭವಾಯಿತು. ಪ್ರಸ್ತುತ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಜನರ ನೋವಿಗೆ ದನಿಯಾಗುವ ರಾಷ್ಟ್ರೋತ್ಥಾನ ರಕ್ತಕೇಂದ್ರದ ಚಟುವಟಿಕೆಗಳನ್ನು ಗುರುತಿಸಿದ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಹಾಗೂ ಕರ್ನಾಟಕ ರಾಜ್ಯ ರಕ್ತಚಾಲನಾ ಪರಿಷತ್ 2011–12ನೇ ಸಾಲಿನ ಕರ್ನಾಟಕದ ಅತ್ಯುತ್ತಮ ರಕ್ತನಿಧಿ (Best Blood Bank in Karnataka) ಎಂದು ಪ್ರಮಾಣಪತ್ರ ಹಾಗೂ ಪರ್ಯಾಯ ಪಾರಿತೋಷಕ ನೀಡಿ ಗೌರವಿಸಿದೆ.

ಹೀಗೆ ಸೇವೆಯ ಪಥದಲ್ಲಿ ಮುನ್ನಡೆದುಕೊಂಡು ಬರುತ್ತಿರುವ ರಕ್ತಕೇಂದ್ರವು ಈವರೆಗೆ (ಮಾರ್ಚ್ 30, 2021) 4,740 ಸ್ವಯಂಪ್ರೇರಿತ ರಕ್ತದಾನ ಶಿಬಿರಗಳನ್ನು ನಡೆಸಿದೆ. 4,23,973 ರಕ್ತದಾನಿಗಳಿಂದ ರಕ್ತ ಸಂಗ್ರಹಿಸಿ, 3,22,257 ರೋಗಿಗಳಿಗೆ (8,59,717 ಯುನಿಟ್) ರಕ್ತ ಪೂರೈಸಲಾಗಿದೆ.

### ವಿಶೇಷತೆಗಳು

ಸಾಮಾಜಿಕ ಕಳಕಳಿಯುಳ್ಳ ಸ್ವಯಂಸೇವಾ ಸಂಸ್ಥೆಗಳು, ಕಂಪೆನಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳ ಸಹಯೋಗದಲ್ಲಿ ರಾಜ್ಯದ ವಿವಿಧೆಡೆಗಳಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರಗಳನ್ನು ನಡೆಸಿ ರಕ್ತವನ್ನು ಸಂಗ್ರಹಿಸಲಾಗುತ್ತಿದೆ.

ಸುಸಜ್ಜಿತ ವಾಹನ, ಸಲಕರಣೆಗಳು ಸೇರಿದಂತೆ ರಕ್ತದಾನ ಶಿಬಿರ ನಡೆಸಲು ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನು ರಕ್ತಕೇಂದ್ರ ಹೊಂದಿದೆ. ಏಕಕಾಲದಲ್ಲಿ 5ಕ್ಕೂ ಅಧಿಕ ಕಡೆಗಳಲ್ಲಿ ಶಿಬಿರ ನಡೆಸುವ ವ್ಯವಸ್ಥೆ ಹೊಂದಿದೆ.

ರಕ್ತಕೇಂದ್ರವು 24X7 ಕಾಲಾವಧಿ ಕಾರ್ಯನಿರ್ವಹಿಸುತ್ತಿದೆ. ರೋಗಿಗಳಿಗೆ ಗುಣಮಟ್ಟದ ರಕ್ತನೀಡುವುದಕ್ಕಾಗಿ ಆಧುನಿಕ ತಂತ್ರಜ್ಞಾನಗಳನ್ನು {SDP (Single Donor Platelets), CLIA, Automated Blood Grouping and Crossmatching} ಯಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.

ಸರ್ಕಾರದ ರಕ್ತಚಾಲನಾ ಪರಿಷತ್ ನಿಗದಿಪಡಿಸಿರುವ ತಪಾಸಣಾ ಶುಲ್ಕಕ್ಕಿಂತಲೂ ಕಡಮೆ ಶುಲ್ಕದಲ್ಲಿ (ಸರ್ಕಾರಿ ಆಸ್ಪತ್ರೆಗಳಿಂದ ಬರುವವರಿಗೆ ತುಂಬಾ ಕಡೆಮೆ ಶುಲ್ಕದಲ್ಲಿ) ಮತ್ತು ಕೆಲ ಸಂದರ್ಭಗಳಲ್ಲಿ ಕಡುಬಡವರಿಗೆ ಉಚಿತವಾಗಿ ರಕ್ತ ಪೂರೈಸುವ ಸಾಮಾಜಿಕ ಕಾಳಜಿ ಹಾಗೂ ಬದ್ಧತೆಯ ಮೂಲಕ ರಾಜ್ಯಾದ್ಯಂತ ಗುರುತಿಸಿಕೊಂಡಿದೆ.

ರೋಗಿಗಳಿಗೆ ಗುಣಮಟ್ಟದ ರಕ್ತನೀಡುವುದಕ್ಕಾಗಿ 2015ರಲ್ಲಿ ಸುಸಜ್ಜಿತ ಸುರಕ್ಷಿತ ಪ್ಲೇಟ್‌ಲೆಟ್ ಫೆರೆಸಿಸ್ ಯಂತ್ರವನ್ನು ಅಳವಡಿಸಿಕೊಳ್ಳಲಾಗಿದೆ. ಈವರೆಗೆ ಒಟ್ಟು 2,887 SDP Units ಗಳನ್ನು ಸಂಗ್ರಹಿಸಿ ಫಲಾನುಭವಿಗಳಿಗೆ ವಿತರಿಸಲಾಗಿದೆ. ಈ ವರ್ಷ ಕೊರೋನಾ ರಕ್ತದಾನಿಗಳ ಕೊರತೆಯ ನಡುವೆಯೂ 133 SDP Unitsಗಳನ್ನು ಸಂಗ್ರಹಿಸಿ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ.

### 2020–21ನೇ ಸಾಲಿನ ವಿವರ

ಈ ವರ್ಷ ಒಟ್ಟು 229 ರಕ್ತದಾನ ಶಿಬಿರಗಳನ್ನು ನಡೆಸಲಾಗಿದೆ.

- ಸ್ವಯಂಸೇವಾ ಸಂಸ್ಥೆಗಳು – 74
- ಆರೆಸ್ಸೆಸ್ ಹಾಗೂ ಬಿಜೆಪಿ – 132
- ಶೈಕ್ಷಣಿಕ ಸಂಸ್ಥೆಗಳು – 09
- ಇತರ (ಗಾರ್ಮೆಂಟ್ಸ್, ಅಪಾರ್ಟ್‌ಮೆಂಟ್ ಇತ್ಯಾದಿ) – 14

ರಕ್ತದಾನಿಗಳು – 20,423
ರಕ್ತದ ಯುನಿಟ್ – 44,463
ಫಲಾನುಭವಿಗಳು – 14,697

### ಆಸರೆ

- ಜೀವಮಾನವಿಡೀ ನಿರಂತರ ರಕ್ತಪೂರಣದ ಆವಶ್ಯಕತೆ ಇರುವ ತಲಸ್ಸೆಮಿಯಾದಿಂದ ಬಳಲುತ್ತಿರುವ 400ಕ್ಕೂ ಅಧಿಕ ಮಕ್ಕಳಿಗೆ 15ರಿಂದ 20 ದಿನಗಳಿಗೊಮ್ಮೆ ನಿರಂತರ ನಿಶ್ಶುಲ್ಕವಾಗಿ ರಕ್ತವನ್ನು ನೀಡಲಾಗುತ್ತಿದೆ.
- ವಿವಿಧ ಆಸ್ಪತ್ರೆಗಳಲ್ಲಿ ಡಯಾಲಿಸಿಸ್‌ಗೆ ಒಳಪಡುತ್ತಿರುವ ಆರ್ಥಿಕವಾಗಿ ಹಿಂದುಳಿದ 153 ರೋಗಿಗಳು ತಮ್ಮ ಹೆಸರನ್ನು ನೊಂದಾಯಿಸಿಕೊಂಡಿದ್ದಾರೆ. ಇವರಿಗೆ ನಿರಂತರವಾಗಿ ಅತ್ಯಂತ ಕಡಮೆ (ಸಂಸ್ಕರಣ ಶುಲ್ಕದಲ್ಲಿ) ಬೆಲೆಯಲ್ಲಿ ರಕ್ತವನ್ನು ನೀಡಲಾಗುತ್ತಿದೆ.
- ನಮ್ಮ ಫಲಾನುಭವಿಗಳಲ್ಲಿ ಸುಮಾರು 45% ಸರ್ಕಾರಿ ಆಸ್ಪತ್ರೆಯಿಂದ ಬರುವ ರೋಗಿಗಳು. (ಬಹುಶಃ ಈ ಪ್ರಮಾಣದಲ್ಲಿ ಸರ್ಕಾರಿ ಆಸ್ಪತ್ರೆಗಳಿಗೆ ರಕ್ತ ವಿತರಿಸುವ ರಕ್ತಕೇಂದ್ರ ಇನ್ನೊಂದಿರಲಾರದು.) ಇವರಿಗೆ ವಿಶೇಷ ರಿಯಾಯಿತಿ ದರದಲ್ಲಿ ರಕ್ತವನ್ನು ಒದಗಿಸಲಾಗುತ್ತಿದೆ.

**ಅಭ್ಯಾಸ ವರ್ಗಗಳು:** ರಕ್ತನಿಧಿಯ ಸಿಬ್ಬಂದಿಗಳ ತಾಂತ್ರಿಕ ಹಾಗೂ ಸೇವಾ ಗುಣಮಟ್ಟವನ್ನು ವೃದ್ಧಿಸುವ, ಕಾರ್ಯಕ್ಷಮತೆ ಹಾಗೂ ವೈಚಾರಿಕ ಬದ್ಧತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಕಳೆದ 8 ವರ್ಷಗಳಿಂದ (ಆಗಸ್ಟ್ 2013) ತಿಂಗಳಿಗೊಮ್ಮೆ ಅಭ್ಯಾಸ ವರ್ಗವನ್ನು ನಡೆಸಲಾಗುತ್ತಿದೆ.

## ಉಲ್ಲೇಖನೀಯ

**ಕೊರೋನಾ ಸಂಕಟದಲ್ಲಿ ರಕ್ತದ ಕೊರತೆ ನೀಗಿಸಿದ ಸಮಾಜಸೇವಕರು:** ಕೊರೋನಾ ಮಹಾಮಾರಿಯಿಂದಾಗಿ ಸಾರ್ವಜನಿಕ ರಕ್ತದಾನ ಶಿಬಿರಗಳು ನಡೆಯದೇ, ರಾಷ್ಟ್ರೋತ್ಥಾನ ರಕ್ತಕೇಂದ್ರದಲ್ಲಿ ಉಂಟಾದ ರಕ್ತದ ಕೊರತೆಯನ್ನು ಗಮನಿಸಿದ ಬೆಂಗಳೂರಿನ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸ್ವಯಂಸೇವಕರು ಹಾಗೂ ಬಿಜೆಪಿ ಕಾರ್ಯಕರ್ತರು ಸೇರಿದಂತೆ ಸಾಮಾಜಿಕ ಕಳಕಳಿಯ ಅನೇಕ ಸಂಘಟನೆಗಳು ಸ್ವಯಂಪ್ರೇರಿತ ರಕ್ತದಾನ ಶಿಬಿರಗಳನ್ನು ಆಯೋಜಿಸಿದರು.

ಆರೆಸ್ಸೆಸ್‌ನ ವಿಜಯನಗರ ಭಾಗದ ಆರೆಸ್ಸೆಸ್ ಸ್ವಯಂಸೇವಕರು ಲಾಕ್‌ಡೌನ್ ನಡುವೆ ವಿಶಿಷ್ಟ ರೀತಿಯಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಿದರು. ರಕ್ತದಾನಕ್ಕೆ ಅರ್ಹ ಸ್ವಯಂಸೇವಕರ ಪಟ್ಟಿ ತಯಾರಿಸಿ, ಅವರನ್ನು ಸಂಪರ್ಕಿಸಿ ರಕ್ತದಾನ ಮಾಡುವಂತೆ ವಿನಂತಿಸಿದರು. ರಕ್ತದಾನ ಶಿಬಿರದಲ್ಲಿ ತೆಗೆದುಕೊಳ್ಳಲಾಗುವ ಎಚ್ಚರಿಕೆ ಕ್ರಮಗಳ ಕುರಿತು ವಿಡಿಯೋ ತಯಾರಿಸಿ ಅವರಿಗೆ ವಾಟ್ಸಾಪ್ ಮೂಲಕ ಕಳುಹಿಸಲಾಯಿತು. ರಕ್ತದಾನ ಮಾಡಲು ನಿರ್ಧರಿಸಿದ ಸ್ವಯಂಸೇವಕರಿಗೆ ನಿಗದಿತ ಸಮಯವನ್ನು ನಿಗದಿಪಡಿಸಿ ಪಾಸ್‌ನ ವ್ಯವಸ್ಥೆ ಮಾಡಲಾಯಿತು.

ರಕ್ತದಾನ ಶಿಬಿರದಲ್ಲಿ ಸರ್ಕಾರ ಹಾಗೂ ವಿಶ್ವ ಆರೋಗ್ಯ ಸಂಸ್ಥೆ ಸೂಚಿಸಿರುವ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಯಿತು. 10 ಬೆಡ್‌ಗಳನ್ನು ಹಾಕಿ, ಪ್ರತೀ ಬೆಡ್‌ಗಳ ಮೇಲ್ವಿಚಾರಣೆ ಹಾಗೂ ರಕ್ತದಾನಿಗಳ ಸಂಪರ್ಕಕ್ಕಾಗಿ ಪ್ರಮುಖರನ್ನು ನಿಯುಕ್ತಿಗೊಳಿಸಿ ವ್ಯವಸ್ಥಿತ ಶಿಸ್ತುಬದ್ಧ ರೀತಿಯಲ್ಲಿ ರಕ್ತದಾನ ಶಿಬಿರ ನಡೆಯಿತು. ಒಟ್ಟು 110 ಮಂದಿ ರಕ್ತದಾನ ಮಾಡಿದರು.


ಹೀಗೆ ವಿಶಿಷ್ಟ ಪ್ರಯೋಗ ಹಾಗೂ ಪ್ರಯತ್ನಗಳ ಮೂಲಕ ಮಾರ್ಚ್ 26ರಿಂದ ಏಪ್ರಿಲ್ 30ರ ವರೆಗೆ ಬೆಂಗಳೂರಿನ 16 ಕಡೆಗಳಲ್ಲಿ ರಕ್ತದಾನ ಶಿಬಿರಗಳನ್ನು ನಡೆಸಲಾಯಿತು. ಒಟ್ಟು 1250 ಮಂದಿ ರಕ್ತದಾನ ಮಾಡಿದರು.

ಕನ್ನಡದ ಖ್ಯಾತ ಚಿತ್ರನಟ ರಕ್ಷಿತ್ ಶೆಟ್ಟಿ ಮತ್ತು ಜಗ್ಗೇಶ್ ಅವರು ಸಾಮಾಜಿಕ ಜಾಲತಾಣಗಳ ಮೂಲಕ ರಾಷ್ಟ್ರೋತ್ಥಾನ ರಕ್ತಕೇಂದ್ರದಲ್ಲಿ ರಕ್ತದಾನ ಮಾಡುವಂತೆ ಕರೆನೀಡಿದರು. ಕರೆಗೆ ಸ್ಪಂಧಿಸಿದ ಇವರ ಅಭಿಮಾನಿಗಳು ರಕ್ತಕೇಂದ್ರಕ್ಕೆ ಆಗಮಿಸಿ ರಕ್ತದಾನ ಮಾಡಿದರು.

## ಪ್ಲಾಸ್ಮಾ ಸಂಗ್ರಹ ಘಟಕ ಕಾರ್ಯಾರಂಭ



ಕೊರೋನಾ ಮಹಾಮಾರಿ ಎಲ್ಲೆಡೆ ಆವರಿಸಿದೆ. ನಿಖರವಾದ ಔಷಧ ಇಲ್ಲದಿರುವುದರಿಂದ ರೋಗಿಗಳಿಗೆ ಚಿಕಿತ್ಸೆ ನೀಡಲು ವಿವಿಧ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಇವುಗಳಲ್ಲೊಂದು ಪ್ಲಾಸ್ಮಾ ಚಿಕಿತ್ಸೆ. ಈ ಚಿಕಿತ್ಸೆಗೆ ಒಳಗಾಗುವ ಕೊರೋನಾ ಪೀಡಿತರಿಗೆ ನೆರವಾಗುವ ಸಲುವಾಗಿ ರಾಷ್ಟ್ರೋತ್ಥಾನ ರಕ್ತಕೇಂದ್ರವು ಪ್ಲಾಸ್ಮಾ ಸಂಗ್ರಹಿಸಿ ಅಗತ್ಯ ಫಲಾನುಭವಿಗಳಿಗೆ ನೀಡುವ ಸಲುವಾಗಿ ಸರ್ಕಾರದ ಅನುಮತಿ ಪಡೆದು ಸೆಪ್ಟೆಂಬರ್ ತಿಂಗಳಲ್ಲಿ ಪ್ಲಾಸ್ಮಾ ಸಂಗ್ರಹ ಘಟಕವನ್ನು ಪ್ರಾರಂಭಿಸಲಾಯಿತು. ಕೊರೋನಾ ಸೋಂಕಿತರಾಗಿ ಗುಣಮುಖರಾದ ನಂತರ ಅವರು ಮಾಡುವ ಪ್ಲಾಸ್ಮಾ ದಾನಕ್ಕೆ Convalescent Covid Plasma (CCP) ಎನ್ನಲಾಗುತ್ತದೆ. ಸ್ವಯಂಪ್ರೇರಿತ ದಾನಿಗಳಿಂದ ಪ್ಲಾಸ್ಮಾವನ್ನು (CCP) ಸಂಗ್ರಹಿಸಿ ಕೊರೋನಾ ಪೀಡಿತ ಫಲಾನುಭವಿಗಳಿಗೆ ನೀಡಲಾಗುತ್ತಿದೆ. ದಾನಿಗಳ ನೋಂದಣಿಗೆ ವಿಶೇಷ ವ್ಯವಸ್ಥೆ ಮಾಡಲಾಯಿತು.




ಒಟ್ಟು 47 ಮಂದಿಯಿಂದ ಪ್ಲಾಸ್ಮಾ ಸಂಗ್ರಹಿಸಿ ಅಗತ್ಯ ಫಲಾನುಭವಿಗಳಿಗೆ ನೀಡಲಾಗಿದೆ.

**ಗಣ್ಯ– ಸೆಲೆಬ್ರಿಟಿಗಳಿಂದ ರಕ್ತದಾನ:** ಕನ್ನಡದ ಖ್ಯಾತ ಚಿತ್ರನಟಿ ಪ್ರಣಿತಾ ಸುಭಾಷ್ ಅವರು ತಮ್ಮ ಸಂಸ್ಥೆಯಿಂದ ರಕ್ತದಾನ ಶಿಬಿರ ಆಯೋಜಿಸಿದರು. ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದೆ ಶೋಭಾ ಕರಂದ್ಲಾಜೆ, ಸಂಗೀತ ನಿರ್ದೇಶಕ ಕೆ. ಕಲ್ಯಾಣ್ ಹಾಗೂ ಹಲವು ಕಿರುತೆರೆ ನಟ–ನಟಿಯರು ರಾಷ್ಟ್ರೋತ್ಥಾನ ರಕ್ತಕೇಂದ್ರದ ವತಿಯಿಂದ ನಡೆದ ರಕ್ತದಾನ ಶಿಬಿರದಲ್ಲಿ ಭಾಗವಹಿಸಿ ರಕ್ತದಾನ ಮಾಡಿದರು.

## ಶಾ ದಾಮಜಿ ಜಾದವಜಿ ಛೇಡಾ ಸ್ಮಾರಕ ರಾಷ್ಟ್ರೋತ್ಥಾನ ರಕ್ತಕೇಂದ್ರ, ಹುಬ್ಬಳ್ಳಿ

ಉತ್ತರ ಕರ್ನಾಟಕ ಭಾಗದ ಜನರಿಗೆ ನೆರವಾಗುವ ಉದ್ದೇಶದಿಂದ ಹುಬ್ಬಳಿಯಲ್ಲಿ ಜೂನ್ 2010ರಲ್ಲಿ ಶಾ ದಾಮಜಿ ಜಾದವಜಿ ಛೇಡ ಅವರ ಕಟ್ಟಡದಲ್ಲಿ ರಾಷ್ಟ್ರೋತ್ಥಾನ ರಕ್ತಕೇಂದ್ರವನ್ನು ಪ್ರಾರಂಭಿಸಲಾಯಿತು. ಪ್ರಸ್ತುತ ಇನ್ಫೋಸಿಸ್ ಫೌಂಡೇಷನ್ ಸಹಕಾರದೊಂದಿಗೆ ರಕ್ತಕೇಂದ್ರ ಕಾರ್ಯನಿರ್ವಹಿಸುತ್ತಿದೆ.

- ಸುಸಜ್ಜಿತ ವಾಹನ, ಸಲಕರಣೆಗಳು ಸೇರಿದಂತೆ ರಕ್ತದಾನ ಶಿಬಿರ ನಡೆಸಲು ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನು ರಕ್ತಕೇಂದ್ರ ಹೊಂದಿದೆ.
- ರಕ್ತನಿಧಿಯು 24x7 ಗಂಟೆಗಳ ಕಾರ್ಯನಿರ್ವಹಿಸುತ್ತಿದೆ. ರೋಗಿಗಳಿಗೆ ಗುಣಮಟ್ಟದ ರಕ್ತನೀಡುವುದಕ್ಕಾಗಿ ಆಧುನಿಕ ತಂತ್ರಜ್ಞಾನಗಳನ್ನು (SDP, CLIA, Automated Blood Grouping and Crossmatching) ಯಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.
- ರಕ್ತಚಾಲನಾ ಪರಿಷತ್ ನಿಗದಿಪಡಿಸಿರುವ ತಪಾಸಣಾ ಶುಲ್ಕಕ್ಕಿಂತಲೂ ಕಡಮೆ ಶುಲ್ಕದಲ್ಲಿ ಮತ್ತು ಕೆಲ ಸಂದರ್ಭಗಳಲ್ಲಿ ಕಡುಬಡವರಿಗೆ ಉಚಿತವಾಗಿ ರಕ್ತ ಪೂರೈಸುವ ಸಾಮಾಜಿಕ ಕಾಳಜಿ ಹಾಗೂ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ.
- ರಕ್ತದಾನಕ್ಕೆ ಅಗತ್ಯ ಡೋನರ್ ಕೋಚ್‌ನ್ನು ಹುಬ್ಬಳ್ಳಿಯ ಕರ್ನಾಟಕ ಬ್ಯಾಂಕ್ ದಾನವಾಗಿ ನೀಡಿದೆ.

**ಅಂಕಿಅಂಶ:** 2019–20ನೇ ಸಾಲಿನಲ್ಲಿ ಒಟ್ಟು 102 ರಕ್ತದಾನ ಶಿಬಿರಗಳನ್ನು ನಡೆಸಲಾಗಿದ್ದು, 8051 ಮಂದಿ ರಕ್ತದಾನ ಮಾಡಿದರು. 14,753 ಯುನಿಟ್ ರಕ್ತಸಂಗ್ರಹಿಸಿ 6883 ಫಲಾನುಭವಿಗಳಿಗೆ ವಿತರಿಸಲಾಗಿದೆ.

- ಈ ವರ್ಷ ಕೊರೋನಾ ನಡುವೆಯೂ 108 SDP Unitsಗಳನ್ನು ಸಂಗ್ರಹಿಸಿ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ.

### ಕೊರೋನಾ ಸಂಕಟದಲ್ಲಿ ಸಮಾಜಕ್ಕೆ ಆಸರೆ

- ತುರ್ತು ಅಗತ್ಯ ಇರುವ ಸಾರ್ವಜನಿಕರಿಗೆ ಅಗತ್ಯ ಆಂಬ್ಯುಲೆನ್ಸ್ ಸೇವೆ ಮಾಡಲಾಗಿದೆ.
- ಸಕ್ಕರೆ ಖಾಯಿಲೆ ಮತ್ತು ರಕ್ತದೊತ್ತಡ ಮುಂತಾದ ರೋಗಿಗಳಿಗೆ ಅಗತ್ಯ ಪರೀಕ್ಷೆ ಮತ್ತು ಮಾರ್ಗದರ್ಶನಕ್ಕೆ ವ್ಯವಸ್ಥೆ ರೂಪಿಸಲಾಗಿತ್ತು.
- ಕೊರೋನಾ ಹಿನ್ನೆಲೆಯಲ್ಲಿ ರಕ್ತದ ಕೊರತೆಯಾಗುತ್ತಿರುವುದನ್ನು ಗಮನಿಸಿ ಹುಬ್ಬಳ್ಳಿಯ ವಿವಿಧ ಸಮುದಾಯಗಳ ಪ್ರಮುಖರನ್ನು ಹಾಗೂ ಸಮಾಜದ ಗಣ್ಯರಲ್ಲಿ ರಕ್ತದಾನ ಶಿಬಿರ ಆಯೋಜಿಸುವಂತೆ ವಿನಂತಿಸಲಾಯಿತು. ಮನವಿಗೆ ಸ್ಪಂದಿಸಿದ ಲೋಕಹಿತ ಟ್ರಸ್ಟ್ (200 ರಕ್ತದಾನಿಗಳು), ದಾಂಡೇಲಿಯ ಭಗತ್‌ಸಿಂಗ್ ಯುವ ಬಳಗ (180 ರಕ್ತದಾನಿಗಳು), ಬ್ರಾಹ್ಮಣ ಸಮಾಜ (340 ರಕ್ತದಾನಿಗಳು) ಮುಂತಾದವರು ರಕ್ತದಾನ ಶಿಬಿರಗಳನ್ನು ಆಯೋಜಿಸಿದರು. ಬ್ರಾಹಣ ಸಮಾಜ ಆಯೋಜಿಸಿದ ರಕ್ತದಾನ ಶಿಬಿರವನ್ನು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಉದ್ಘಾಟಿಸಿದರು.

ಈ ಶಿಬಿರದಿಂದ ಸಮಾಜದ ವಿವಿಧ ಸಂಘಟನೆಗಳ ನಡುವೆ ಸಾಮರಸ್ಯ ವೃದ್ಧಿಸಲು ನೆರವಾಯಿತು ಎಂದು ಅನೇಕ ಸಂಘಟಕರು ಅಭಿಪ್ರಾಯಪಟ್ಟಿದ್ದಾರೆ.

- ಲಾಕ್‌ಡೌನ್ ಸಂದರ್ಭದಲ್ಲಿ ನಮ್ಮ ರಕ್ತಕೇಂದ್ರಕ್ಕೆ ಆಗಮಿಸಿ ರಕ್ತದಾನ ಮಾಡಬಯಸುವವರನ್ನು ಕರೆತರಲು ವಾಹನದ ಸೌಲಭ್ಯ ಮಾಡಲಾಯಿತು.
- ಇನ್‌ಫೋಸಿಸ್ ಫೌಂಡೇಶನ್ ರಕ್ತಕೇಂದ್ರಕ್ಕೆ ಅಗತ್ಯ Gloves, Mask, Sanitizer, Disinfectant Soln. ಮುಂತಾದವುಗಳನ್ನು ಉಚಿತವಾಗಿ ನೀಡಿದರು.
- ಸ್ಥಳೀಯರು ರಕ್ತಕೇಂದ್ರದ ಸಿಬ್ಬಂದಿಗಳಿಗೆ 2 ತಿಂಗಳವರೆಗೆ ನಿರಂತರವಾಗಿ ಉಚಿತ ಊಟದ ವ್ಯವಸ್ಥೆ ಮಾಡಿದರು.

**ಕೊರೋನಾ ಸೇನಾನಿ ವೈದ್ಯರಿಗೆ ಸಂಮಾನ:** ಕೊರೋನಾ ಮೊದಲ ಅಲೆಯ ಸಂದರ್ಭದಲ್ಲಿ ಶ್ಲಾಘನೀಯ ಕಾರ್ಯ ಮಾಡಿದ ವೈದ್ಯರಿಗೆ ಸಂಮಾನ ಕಾರ್ಯಕ್ರಮವನ್ನು 2020ರ ಮೇ 5ರಂದು ಆಯೋಜಿಸಲಾಯಿತು.

ಸೇವಾಭಾರತಿಯ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರೆಸ್ಸೆಸ್‌ನ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖರಾದ ಮಂಗೇಶ್ ಭೇಂಡೆ ಅವರು ಸ್ಥಳೀಯ ಆಸ್ಪತ್ರೆಗಳ ವೈದ್ಯರನ್ನು ಗೌರವಿಸಿ ಶ್ಲಾಘಿಸಿದರು. ಕೊರೋನಾ ಪೀಡಿತರ ಆರೈಕೆಯಲ್ಲಿ ತೊಡಗಿಸಿಕೊಂಡಿರುವ ಹುಬ್ಬಳ್ಳಿ–ಧಾರವಾಡದ ವೈದ್ಯರುಗಳಾದ ಡಾ. ಬಾಲಾಜಿ ಆಸ್ಪತ್ರೆಯ ಕ್ರಾಂತಿ ಕಿರಣ್, ಶಕುಂತಲಾ ನರ್ಸಿಂಗ್ ಹೋಂನ ಡಾ. ವಿಜಯ ಗಡಗಿ, ಕಿರಣ್ ಗುಡ್ಡದಕೇರಿ, ಡಾ. ಶರತ್ ನೆರೇಗಲ್, ಡಾ.

ಅಂಜಲಿ ನರೇಗಲ್, ಡಾ. ಮಹೇಶ್ ನಾಲವಾಡ್, ಡಾ. ಬಸವಂತ ಮೋಹಿತೆ, ಡಾ. ರವೀಂದ್ರ, ಡಾ. ಮಲ್ಲಪ್ಪನ ಪಾಟೀಲ್, ಡಾ. ಮಲ್ಲಿಕಾರ್ಜುನ್ ರಡ್ಡೆರ, ಡಾ. ಸೋಮಶೇಖರ್ ಹುದ್ದಾರ್, ಡಾ. ರಾಮಚಂದ್ರ, ಡಾ. ಸುಧೀರ್ ಜಂಬಗಿ, ಡಾ. ಆದಿತ್ಯ ಪಾಂಡುರಂಗಿ ಮುಂತಾದವರನ್ನು ಸಂಮಾನಿಸಲಾಯಿತು.

### ಆಯುರ್ವೇದ ಚಿಕಿತ್ಸಾಲಯ

ಬೆಂಗಳೂರಿನ ರಾಷ್ಟ್ರೋತ್ಥಾನ ರಕ್ತ ಕೇಂದ್ರದಿಂದ ವಿಶೇಷವಾಗಿ ಗಳಗಂಡ (ಥೈರಾಯ್ಡ್) ಸೇರಿದಂತೆ ವಿವಿಧ ರೋಗಗಳಿಗೆ ಆಯುರ್ವೇದ ಪದ್ಧತಿಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಹಲವು ರೋಗಿಗಳ ಆರೋಗ್ಯ ಸುಧಾರಣೆಯಲ್ಲಿದ್ದು, ಹಲವರು ಈ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖರಾಗಿದ್ದಾರೆ.

ಈ ವರ್ಷ ಕೊರೋನಾ ಕಾರಣದಿಂದ ವೈಯಕ್ತಿಕ ತಪಾಸಣೆ ನಡೆಯಲಿಲ್ಲ. ಆದರೆ ವೈದ್ಯರು ಆಧುನಿಕ ಮಾಧ್ಯಮಗಳ ಮೂಲಕ ಅಗತ್ಯ ಮಾರ್ಗದರ್ಶನ ಮಾಡಿದರು.



## ಆ) 'ಸಂರಕ್ಷಾ' – ತಲೆಸ್ಸೆಮಿಯಾ ಮಕ್ಕಳ ಆರೈಕೆ ಕೇಂದ್ರ

ಮಕ್ಕಳಲ್ಲಿ ಹುಟ್ಟುವಾಗಲೇ ಇರುವ ಆನುವಂಶಿಕ ನ್ಯೂನತೆಯಾದ ತಲೆಸ್ಸೆಮಿಯಾ ಬಾಧಿತ ಮಗುವಿನ ದೇಹದಲ್ಲಿ ಹಿಮೋಗ್ಲೋಬಿನ್‌ಯುಕ್ತ ಗುಣಮಟ್ಟದ ರಕ್ತದ ಉತ್ಪತ್ತಿಯಾಗುವುದಿಲ್ಲ. ಇಂತಹ ಮಕ್ಕಳು ಉಲ್ಲಾಸದಿಂದಿರಲು ನಿರಂತರ ರಕ್ತಪೂರಣ (Blood Transfusion) ಅನಿವಾರ್ಯ. ಈ ನ್ಯೂನತೆಯಿಂದ ಬಳಲುತ್ತಿರುವ ಮಕ್ಕಳಿಗೆ ಹಾಗೂ ಕುಟುಂಬಕ್ಕೆ ನೆರವಾಗುವ ಉದ್ದೇಶದಿಂದ 2013ರಲ್ಲಿ 'ಸಂರಕ್ಷಾ' – ತಲೆಸ್ಸೆಮಿಯಾ ಮಕ್ಕಳ ಆರೈಕೆ ಕೇಂದ್ರವನ್ನು ತೆರೆಯಲಾಯಿತು.

- ತಲೆಸ್ಸೆಮಿಯಾ ಪೀಡಿತ ಮಕ್ಕಳಿಗೆ ಗುಣಮಟ್ಟದ ರಕ್ತವನ್ನು ನಿರಂತರವಾಗಿ ನೀಡಲಾಗುತ್ತಿದೆ.
- ರಕ್ತತಪಾಸಣೆ, ರಕ್ತಪೂರಣ ಮಾಡುವುದರ ಜೊತೆಗೆ ಫೋಲಿಕ್ ಆ್ಯಸಿಡ್, ಕ್ಯಾಲ್ಸಿಯಂ, ಬಿ–ಕಾಂಪ್ಲೆಕ್ಸ್ ಮತ್ತು ಮಲ್ಟಿ–ವಿಟಮಿನ್ ಮುಂತಾದ ಅಗತ್ಯ ಔಷಧಗಳನ್ನು ಅವರ ಆರ್ಥಿಕ ಸ್ಥಿತಿಗತಿಯನ್ನು ಗಮನಿಸದೆ ಎಲ್ಲರಿಗೂ ಉಚಿತವಾಗಿ ನೀಡಲಾಗುತ್ತಿದೆ.
- ಹೃದಯ ಸಂಬಂಧಿ ಸಮಸ್ಯೆ ಇರುವ ಮಕ್ಕಳಲ್ಲಿ ಹಿಮೋಗ್ಲೊಬಿನ್ ಪ್ರಮಾಣವನ್ನು 10–11 gm/dlನಲ್ಲಿ ಕಾಪಾಡಿಕೊಳ್ಳುವುದು ಅತ್ಯಗತ್ಯ. ಇದಕ್ಕಾಗಿ ಅಂತಹ ಮಕ್ಕಳಿಗಾಗಿ ಪ್ರತೀ ಬುಧವಾರ ಸೂಪರ್–ಟ್ರಾನ್ಸ್‌ಫ್ಯೂಷನ್ ನಡೆಸಲಾಗುತ್ತಿದೆ. ಪ್ರಸ್ತುತ 6 ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.
- ನಿರಂತರ ರಕ್ತಪೂರಣದಿಂದ ಕೆಲವು ಮಕ್ಕಳ ರಕ್ತದಲ್ಲಿ ಕಬ್ಬಿಣದ ಅಂಶ ಹೆಚ್ಚಾಗುತ್ತದೆ. ಇದನ್ನು ಹೋಗಲಾಡಿಸಲು ಮಕ್ಕಳಿಗೆ ನಿರಂತರವಾಗಿ Desferal ಮಾತ್ರೆ ಹಾಗೂ ಇಂಜೆಕ್ಷನ್ ನೀಡಲಾಗುತ್ತಿದೆ.
- ತಲೆಸ್ಸೆಮಿಯಾ ಪೀಡಿತ ಮಕ್ಕಳಿಗೆ ಮಾತ್ರವಲ್ಲದೇ ಸಂಪೂರ್ಣ ಕುಟುಂಬಕ್ಕೆ ನಿರಂತರವಾಗಿ ಅಗತ್ಯ ಮಾರ್ಗದರ್ಶನ ನೀಡಲಾಗುತ್ತಿದೆ.

**ಫಲಾನುಭವಿಗಳು:** ಪ್ರಸ್ತುತ 418 ಮಕ್ಕಳು ಸಂರಕ್ಷಾದಲ್ಲಿ ಆರೈಕೆ ಪಡೆಯುತ್ತಿದ್ದಾರೆ. ಬೆಂಗಳೂರು ಮಾತ್ರವಲ್ಲದೆ ರಾಜ್ಯದ 30 ಜಿಲ್ಲೆಗಳು ಹಾಗೂ ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಿಂದ ತಲೆಸ್ಸೆಮಿಯಾ ಪೀಡಿತರು ಆರೈಕೆಗಾಗಿ 'ಸಂರಕ್ಷಾ'ಕ್ಕೆ ಬರುತ್ತಿದ್ದಾರೆ.

## ಈ ವರ್ಷದ ಅಂಕಿ-ಅಂಶ

| | |
|---|---|
| ಆರೈಕೆ ಪಡೆಯುತ್ತಿರುವ ಮಕ್ಕಳು | 409 |
| ಹೊಸದಾಗಿ ನೋಂದಾಯಿತ ಮಕ್ಕಳು | 09 |
| ಈ ಮಕ್ಕಳಿಗೆ ನೀಡಲಾದ ಒಟ್ಟು ರಕ್ತದ ಯುನಿಟ್ | 7106 |

## ಉಪಲಬ್ಧಿ

- ಸಂರಕ್ಷಾದಲ್ಲಿ ಶುಶ್ರೂಷೆ ಪಡೆಯುತ್ತಿರುವ ಬಹುತೇಕ ಎಲ್ಲ ಮಕ್ಕಳಲ್ಲಿ ಇದೀಗ ಆರೋಗ್ಯದಲ್ಲಿ ಸ್ಥಿರತೆ ಕಂಡುಬರುತ್ತಿವೆ. ಅವರ ಎತ್ತರ ಹಾಗೂ ತೂಕದಲ್ಲೂ ಸುಧಾರಣೆಯಾಗಿದೆ. ಗುಣಮಟ್ಟದ ಪರೀಕ್ಷಿತ ರಕ್ತವನ್ನು ನೀಡುತ್ತಿರುವುದರಿಂದ ಮಕ್ಕಳಲ್ಲಿ ಹಿಮೋಗ್ಲೋಬಿನ್ ಪ್ರಮಾಣ ಹೆಚ್ಚಾಗಿದೆ.
- ಪಿತ್ತಕೋಶ (Liver) ಮತ್ತು ಗುಲ್ಮ (Spleen)ಗಳ ಗಾತ್ರದಲ್ಲಿ ಸುಧಾರಣೆಯಾಗುತ್ತಿದೆ.
- ಉಚಿತವಾಗಿ Hydroxy Urea ಚಿಕಿತ್ಸೆ ನೀಡಲಾಗುತ್ತಿದೆ. ಇದರಿಂದ ರಕ್ತಪೂರಣದ ನಡುವಿನ ಅವಧಿಯು ಹೆಚ್ಚಿದೆ. ಮಕ್ಕಳ ದೇಹದಲ್ಲಿ Iron Overload ಕಡಮೆಯಾಗಿ ಆರೋಗ್ಯದಲ್ಲಿ ಸುಧಾರಣೆ ಕಂಡುಬರುತ್ತಿವೆ. ಸಾಮಾನ್ಯವಾಗಿ 15-20 ದಿನಗಳಿಗೊಮ್ಮೆ ಇದ್ದ ರಕ್ತಪೂರಣದ ಅವಧಿ ಕೆಲ ಮಕ್ಕಳಲ್ಲಿ 2ರಿಂದ 10 ತಿಂಗಳವರೆಗೆ ವಿಸ್ತರಿಸಿದೆ.
- ಪ್ರಸ್ತುತ 32 Sickle Cell ರೋಗಿಗಳಿಗೆ ಕೂಡ ಹೈಡ್ರಾಕ್ಸ್ ಯೂರಿಯಾ ನೀಡಲಾಗುತ್ತಿದೆ. ಅದರಿಂದ ಅವರು ನೋವಿಲ್ಲದೆ ಸಹಜ ಜೀವನವನ್ನು ನಡೆಸಲು ಸಾಧ್ಯವಾಗುತ್ತಿದೆ.
- ಪೋಷಕರು ತಮ್ಮ ಮಕ್ಕಳ ಬಗ್ಗೆ ಅಗತ್ಯ ಕಾಳಜಿ ವಹಿಸುತ್ತಿದ್ದಾರೆ. ಮಕ್ಕಳು ಶಾಲೆಗೆ ಹೋಗಲು ಆರಂಭಿಸಿದ್ದಾರೆ. ಶಾಲೆ ಮತ್ತು ಮನೆಯಲ್ಲಿ ಅವರ ಸಾಧನೆ-ನಡವಳಿಕೆಗಳು ಉತ್ತಮಗೊಂಡಿವೆ.

## ಇ) ಅಗ್ನಿವೇಶ ಆಯುರ್ವೇದ ಅನುಷ್ಠಾನ

ಆರೋಗ್ಯ ಸಂರಕ್ಷಣೆಗಾಗಿ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಆಯುರ್ವೇದ ಪದ್ಧತಿ ಜಾರಿಯಲ್ಲಿತ್ತು. ಯಾವುದೇ ಬಾಹ್ಯ ತೊಂದರೆಗಳಿಲ್ಲದೆ ರೋಗವನ್ನು ಪರಿಣಾಮಕಾರಿಯಾಗಿ ಹಾಗೂ ಸಂಪೂರ್ಣವಾಗಿ ಗುಣಪಡಿಸಬಲ್ಲ ಮತ್ತು ಆರೋಗ್ಯಸ್ಥಿತಿಯನ್ನು ಸ್ಥಿರವಾಗಿ ಕಾಪಾಡಬಲ್ಲ ಚಿಕಿತ್ಸಾ ಕ್ರಮ ಆಯುರ್ವೇದ ಪದ್ಧತಿಯದ್ದು. ತಾತ್ಕಾಲಿಕ ಪರಿಹಾರವನ್ನೇ ನೆಚ್ಚಿಕೊಂಡಿರುವ ಜನಸಾಮಾನ್ಯರ ಮನಃಸ್ಥಿತಿಗೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಇಂದು ಆಯುರ್ವೇದ ವೈದ್ಯರು ಇನ್ನಿತರ ವೈದ್ಯಕೀಯ ಪದ್ಧತಿಯಲ್ಲಿ ಚಿಕಿತ್ಸೆ ನೀಡುತ್ತಿದ್ದಾರೆ. ಹೀಗಾಗಿ ಆಯುರ್ವೇದ ವೈದ್ಯರನ್ನು ಸಂಘಟಿಸಿ, ಅವರಲ್ಲಿ ವಿಶ್ವಾಸ ತುಂಬುವ ಸಲುವಾಗಿ ಹಾಗೂ ಆಯುರ್ವೇದದ ವಿವಿಧ ಮಜಲುಗಳನ್ನು ಪರಿಚಯಿಸುವ ಮತ್ತು ಅನೇಕ ಸಮಸ್ಯೆಗಳಿಗೆ ಆಯುರ್ವೇದದ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಹಂಚಿಕೊಳ್ಳುವ ಸಲುವಾಗಿ ಅಗ್ನಿವೇಶ ಆಯುರ್ವೇದ ಅನುಷ್ಠಾನ ಪ್ರಾರಂಭವಾಯಿತು.

ಅಗ್ನಿವೇಶ ಆಯುರ್ವೇದ ಅನುಷ್ಠಾನವು ರಾಷ್ಟ್ರೋತ್ಥಾನ ಆರೋಗ್ಯ ಸೇವಾ ಕೇಂದ್ರದ ಚಟುವಟಿಕೆಯಾಗಿದ್ದು ಕಳೆದ 29 ವರ್ಷಗಳಿಂದ ಆಯುರ್ವೇದ ವೈದ್ಯರ ನಡುವೆ ಕೆಲಸ ನಿರ್ವಹಿಸುತ್ತಿದೆ.

**ಸದಸ್ಯರು:** ಬಳ್ಳಾರಿ, ಹಾವೇರಿ, ತುಮಕೂರು, ಬೆಳಗಾವಿ, ಗದಗ, ಬಾಗಲಕೋಟೆ, ಕಲಬುರಗಿ, ಚಿತ್ರದುರ್ಗ, ಮೈಸೂರು ಹಾಗೂ ಬೆಂಗಳೂರು ಸೇರಿದಂತೆ ರಾಜ್ಯದ 16 ಜಿಲ್ಲೆಗಳ ಮತ್ತು ಆಂದ್ರ ಪ್ರದೇಶ ಹಾಗೂ ಅಮೆರಿಕದ ಆಯುರ್ವೇದ ವೈದ್ಯರು ಅಗ್ನಿವೇಶದ ಸದಸ್ಯತ್ವ ಹೊಂದಿದ್ದಾರೆ. ಪ್ರಸ್ತುತ ಒಟ್ಟು 403 ಆಯುರ್ವೇದ ವೈದ್ಯರು ಸದಸ್ಯತ್ವ ಹೊಂದಿದ್ದಾರೆ.

**ಸದಸ್ಯ ವೈದ್ಯರಿಗಾಗಿ:** ಆಯುರ್ವೇದ ಪದ್ಧತಿಯನ್ನು ಪರಿಣಾಮಕಾರಿಯಾಗಿಸಲು ಹಾಗೂ ಎದುರಾಗುವ ಗೊಂದಲ-ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಆಯುರ್ವೇದ ವೈದ್ಯರಿಗಾಗಿ (ವಿವಿಧ ಆಯುರ್ವೇದ ಔಷಧ ಕಂಪೆನಿಗಳ ಸಹಯೋಗದಲ್ಲಿ) ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

- ತಿಂಗಳಿಗೊಮ್ಮೆ ವಿಶಿಷ್ಟ ವಿಷಯಗಳ ಕುರಿತು ಉಪನ್ಯಾಸ-ಸಂವಾದ ಕಾರ್ಯಕ್ರಮಗಳನ್ನು (ಮಾಸಿಕ ನಿರಂತರ ವೈದ್ಯಕೀಯ ಶಿಕ್ಷಣ – ಸಿ.ಎಂ.ಇ.) ನಡೆಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ದೇಶ ಹಾಗೂ ರಾಜ್ಯದ ಪ್ರತಿಷ್ಠಿತ ಆಯುರ್ವೇದ ವೈದ್ಯರು ಆಗಮಿಸಿ ಮಾರ್ಗದರ್ಶನ ಮಾಡುತ್ತಾರೆ. ಕೊರೋನಾ ಕಾರಣದಿಂದ ಆನ್‌ಲೈನ್ ಉಪನ್ಯಾಸ ನಡೆಸಲಾಗಿದೆ.
- ಆಯುರ್ವೇದ ವೈದ್ಯಕೀಯ ಸೇವೆ ಮತ್ತು ವಿಚಾರ ಸಂಕಿರಣಗಳನ್ನು ನಡೆಸಲಾಗುತ್ತಿದೆ.

# ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ

**'ಸರ್ವೇ ಸಂತು ನಿರಾಮಯಾಃ' ಎಂಬ ಪಾರಂಪರಿಕ ಉಕ್ತಿಯಂತೆ ಎಲ್ಲರೂ ಕಾಯಿಲೆಮುಕ್ತ, ಆದರ್ಶ ಜೀವನವನ್ನು ನಡೆಸುವಂತಾಗಬೇಕೆಂಬ ಆಶಯದಿಂದ ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ 1972ರಲ್ಲಿ ಪ್ರಾರಂಭವಾಯಿತು.**



ಪ್ರಸ್ತುತ ಬೆಂಗಳೂರಿನಲ್ಲಿ ಹತ್ತು ಕೇಂದ್ರಗಳಿದ್ದು 136 ತರಗತಿಗಳು ಹಾಗೂ 3,000 ಕ್ಕೂ ಹೆಚ್ಚು ಜನರು ಪ್ರತಿ ದಿನ ಯೋಗದ ಲಾಭವನ್ನು ಪಡೆಯುತ್ತಿದ್ದಾರೆ. ಒಟ್ಟು 130 ಶಿಕ್ಷಕರು (110 ಗೌರವ ಶಿಕ್ಷಕರು ಹಾಗೂ 20 ಪೂರ್ಣಕಾಲಿಕ ಶಿಕ್ಷಕರು) ಕೇಂದ್ರದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಕಳೆದ 49 ವರ್ಷಗಳಿಂದ ಯೋಗಸಂಬಂಧಿತ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿರುವ ರಾಷ್ಟ್ರೋತ್ಥಾನ ಯೋಗವಿಭಾಗವು ಪ್ರಸ್ತುತ ಬೆಂಗಳೂರಿನಲ್ಲಿ ಒಟ್ಟು 10 ಯೋಗಕೇಂದ್ರಗಳನ್ನು – ಜಯನಗರ, ಕೇಶವಶಿಲ್ಪ, ಸುಂಕೇನಹಳ್ಳಿ, ಕುಂದಲಹಳ್ಳಿ, ಸದಾಶಿವನಗರ, ಕಲ್ಯಾಣನಗರ, ಗಾಯಿತ್ರಿನಗರ, ನಾಗರಬಾವಿ, ಕಾಮಾಕ್ಷಿಪಾಳ್ಯ ಮತ್ತು ಕೋಣನಕುಂಟೆ – ನಡೆಸುತ್ತಿದೆ.

ಹತ್ತು ಕೇಂದ್ರಗಳಲ್ಲಿ ಪ್ರತಿನಿತ್ಯ ಬೇರೆ ಬೇರೆ ಅವಧಿಗಳಲ್ಲಿ, ಬೇರೆ ಬೇರೆ ಸ್ತರಗಳಲ್ಲಿ (ಪ್ರವೇಶ, ಅಭ್ಯಾಸ, ಪ್ರಗತ, ಯೋಗ ಚಿಕಿತ್ಸೆ, ವಾರಾಂತ್ಯದ ಯೋಗ ತರಗತಿ, ಮಕ್ಕಳ ಯೋಗ ತರಗತಿಗಳು) ಒಟ್ಟು 136 ಯೋಗ ತರಗತಿಗಳು ನಡೆಯುತ್ತಿವೆ. ಸುಮಾರು 3,000 ಯೋಗಬಂಧುಗಳು ಪ್ರತಿನಿತ್ಯ ಯೋಗತರಗತಿಗಳಲ್ಲಿ ಭಾಗವಹಿಸುತ್ತಿದ್ದಾರೆ. ಒಟ್ಟು 130 ಶಿಕ್ಷಕರು (110 ಗೌರವ ಶಿಕ್ಷಕರು ಹಾಗೂ 20 ಪೂರ್ಣಕಾಲಿಕ ಶಿಕ್ಷಕರು) ಯೋಗವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

**ಹೊಸ ಕೇಂದ್ರ ಆರಂಭ:** ಯೋಗವನ್ನು ಇನ್ನಷ್ಟು ಜನರಿಗೆ ತಲಪಿಸುವ ದೃಷ್ಟಿಯಿಂದ 2020ರಲ್ಲಿ ಬೆಂಗಳೂರಿನ ಕೋಣನಕುಂಟೆಯ ಖ್ಯಾತ ಕಟ್ಟಡ ಸಮುಚ್ಚಯ ವಸತಿ ಗೃಹವಾದ ಪ್ರೆಸ್ಟಿಜ್ ಫಾಲ್ಕನ್ ಸಿಟಿಯಲ್ಲಿ ನೂತನ ಯೋಗ ಕೇಂದ್ರವನ್ನು ಆರಂಭಿಸಲಾಯಿತು.

**ನೂತನ ಯೋಗ ಕಟ್ಟಡದ ಲೋಕಾರ್ಪಣೆ:** ಬೆಂಗಳೂರಿನ ಕುಂದಲಹಳ್ಳಿಯ ಪರಿಸರದ ಯೋಗಾಭ್ಯಾಸಿಗಳಿಗಾಗಿ 2014ರಿಂದ ಯೋಗ ವಿಭಾಗವು ಯೋಗಕೇಂದ್ರವನ್ನು ನಡೆಸಿಕೊಂಡು ಬರುತ್ತಿದೆ. ಅಲ್ಲಿಯ ವಿಶಾಲ ಪರಿಸರದಲ್ಲಿ ಇದೀಗ ನೂತನ ಕಟ್ಟಡ 'ರಾಷ್ಟ್ರೋತ್ಥಾನ ಆರೋಗ್ಯ ಸಂಕೀರ್ಣ'ವನ್ನು ನಿರ್ಮಿಸಲಾಗಿದ್ದು, ಅದರ ಲೋಕಾರ್ಪಣ ಸಮಾರಂಭವು 2020ರ ಅಕ್ಟೋಬರ್ 29ರಂದು ನಡೆಯಿತು. ಆರೆಸ್ಸೆಸ್‌ನ ಕ್ಷೇತ್ರೀಯ ಕಾರ್ಯವಾಹರಾದ ನಾ. ತಿಪ್ಪೆಸ್ವಾಮಿ, ರಾಷ್ಟ್ರೋತ್ಥಾನದ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಮುಂತಾದವರು ಉಪಸ್ಥಿತರಿದ್ದರು. ಇಲ್ಲಿ ಯೋಗ, ಫಿಟ್‌ನೆಸ್ ಸೆಂಟರ್, ಒಳಾಂಗಣ ಕ್ರೀಡಾಂಗಣ, ಈಜುಕೋಳ, ಕರಾಟೆ, ನೃತ್ಯ–ಸಂಗೀತ ಕೇಂದ್ರ ಮುಂತಾದ ಚಟುವಟಿಕೆಗಳನ್ನು ನಡೆಸಲು ಉದ್ದೇಶಿಸಲಾಗಿದೆ.

## ಯೋಗಶಿಕ್ಷಕರಿಗಾಗಿ

**ಶಿಕ್ಷಕರ ಸೇರ್ಪಡೆ:** ಅಗತ್ಯಕ್ಕೆ ತಕ್ಕಂತೆ ಯೋಗಶಿಕ್ಷಕರನ್ನು ಸೇರ್ಪಡೆಗೊಳಿಸುವ ಸಲುವಾಗಿ ಸಂಸ್ಥೆಯ ಯೋಗಕೇಂದ್ರಗಳಲ್ಲಿ ಹಲವು ವರ್ಷಗಳಿಂದ ಯೋಗಾಭ್ಯಾಸ ಮಾಡುತ್ತಿರುವವರನ್ನು ಗುರುತಿಸಿ, ಅವರಿಗೆ ವಿಶೇಷ ತರಬೇತಿ ನೀಡಿ ಅವರನ್ನು ಯೋಗಶಿಕ್ಷಕರನ್ನಾಗಿ ನೇಮಿಸಿಕೊಳ್ಳಲಾಗುತ್ತಿದೆ. ಇವರು ತಮ್ಮ ಬಿಡುವಿನ ಅವಧಿಯಲ್ಲಿ ನಮ್ಮ ಯೋಗಕೇಂದ್ರದಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಾರೆ.

2020–2021ರಲ್ಲಿ ಎಲ್ಲ ಕೇಂದ್ರಗಳಲ್ಲಿ ಒಟ್ಟು 18 ಮಂದಿ ಯೋಗಬಂಧುಗಳನ್ನು ಹಾಗೂ ನಾಲ್ವರನ್ನು ಪೂರ್ಣಕಾಲಿಕ ಶಿಕ್ಷಕರನ್ನಾಗಿ ಆಯ್ಕೆಮಾಡಿ ಅವರನ್ನು ಯೋಗ ಶಿಕ್ಷಕರನ್ನಾಗಿ ಜೋಡಿಸಲಾಗಿದೆ. ಒಟ್ಟು 120 ಮಂದಿ ಗೌರವ ಶಿಕ್ಷಕರು ಹಾಗೂ 20 ಮಂದಿ ಪೂರ್ಣಾಕಾಲಿಕ ಶಿಕ್ಷಕರಿದ್ದಾರೆ.

**ಚಿಂತನ–ಮಂಥನ:** ರಾಷ್ಟ್ರೋತ್ಥಾನ ಯೋಗ ವಿಭಾಗದ ಶಿಕ್ಷಕರ ಚಿಂತನ ಶಕ್ತಿ ಹೆಚ್ಚಿಸುವ ಸಲುವಾಗಿ ಮತ್ತು ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಎಲ್ಲ ಯೋಗಶಿಕ್ಷಕರಿಗೆ ವಾರಕೊಮ್ಮೆ ಶಿಕ್ಷಕರ ತರಬೇತಿಯನ್ನು ನೀಡಲಾಗುತ್ತಿದೆ.

## ಯೋಗಬಂಧುಗಳಿಗಾಗಿ

ಯೋಗಾಭ್ಯಾಸದ ಜೊತೆಜೊತೆಗೆ ಯೋಗಬಂಧುಗಳಲ್ಲಿ (ಯೋಗಾಭ್ಯಾಸಿಗಳಲ್ಲಿ) ಸಾಮಾಜಿಕ ಕಾಳಜಿ, ಸಾಂಸ್ಕೃತಿಕ ಪರಂಪರೆ ಬಗೆಗೆ ಜಾಗೃತಿ–ಹೆಮ್ಮೆ ಮೂಡಿಸುವ ಸಲುವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

**ಉಪನ್ಯಾಸ:** ಯೋಗಭ್ಯಾಸದ ಜೊತೆಗೆ ಒಳ್ಳೆಯ ಆರೋಗ್ಯ, ಒಳ್ಳೆಯ ನಡುವಳಿಕೆ, ಸುಸಂಸ್ಕೃತ ಜೀವನದ ಬಗ್ಗೆ ಜಾಗೃತಿ ಮೂಡಿಸಲು ತಿಂಗಳಿಗೊಮ್ಮೆ ಉಪನ್ಯಾಸ ಕಾರ್ಯಕ್ರಮಗಳನ್ನು ಹಲವು ವರ್ಷಗಳಿಂದ ಆಯೋಜಿಸಲಾಗುತ್ತಿದೆ. ಕೊರೋನಾ ಕಾರಣದಿಂದ ಈ ವರ್ಷ 2021ರ ಜನವರಿಯಿಂದ ಯೋಗವಿಭಾಗದ ವಿವಿಧ ಕೇಂದ್ರಗಳಲ್ಲಿ ಉತ್ತಮ ಜೀವನಶೈಲಿ, ಕೌಟುಂಬಿಕ ಮೌಲ್ಯಗಳು ಎಂಬ ವಿಷಯಗಳ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸಾಮಾಜಿಕ ಕಾರ್ಯಕರ್ತ ವೆಂಕಟೇಶ್ ಹೆಗ್ಡೆ, ಆಯುರ್ವೇದ ವೈದ್ಯರಾದ ಡಾ॥ ಪುನೀತ್, ಡಾ॥ ಶ್ರುತಿ ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.

**ವಿವಿಧ ಉತ್ಸವಗಳ ಆಚರಣೆ:** ಯೋಗಾಭ್ಯಾಸಿಗಳಲ್ಲಿ ಭಾರತೀಯ ಮೌಲ್ಯಗಳ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ಭಾರತೀಯ ಸಾಂಸ್ಕೃತಿಕ ಪರಂಪರೆಯ ವಿಶೇಷ ದಿನಗಳಂದು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ವರ್ಷ ಕೊರೋನಾ ಕಾರಣದಿಂದ ಕೆಲವು ಕಾರ್ಯಕ್ರಮಗಳು ನಡೆಸಲಾಗಲಿಲ್ಲ.




ರಥಸಪ್ತಮಿಯ ಪ್ರಯುಕ್ತ ಎಲ್ಲ ಯೋಗಕೇಂದ್ರಗಳಲ್ಲಿ ಸಾಮೂಹಿಕ ಸೂರ್ಯನಮಸ್ಕಾರ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ರಾಮಕೃಷ್ಣಾಶ್ರಮದ ಮಂಗಳನಾಥಾನಂದ ಸ್ವಾಮಿಜೀ, ಖ್ಯಾತ ವಾಗ್ಮಿ ಡಾ॥ ಆರತಿ ಬಿ.ಎ., ಉಪನ್ಯಾಸಕರಾದ ರಂಗನಾಥ ಶರ್ಮ, ಸಾಮಾಜಿಕ ಕಾರ್ಯಕರ್ತರಾದ ಸುಬ್ರಮಣ್ಯ ಭಟ್, ವೆಂಕಟೇಶ ಹೆಗ್ಡೆ, ಗಜಾನನ ಲೋಂಡೆ ಅವರು ಉಪನ್ಯಾಸ ನೀಡಿದರು. ಸುಮಾರು 1,000 ಯೋಗಬಂಧುಗಳು ಭಾಗವಹಿಸಿದರು.


**ಸೇವಾಚಟುವಟಿಕೆಗೆ ಸಹಭಾಗಿತ್ವ:** ಯೋಗಾಭ್ಯಾಸಿಗಳಲ್ಲಿ ಸಾಮಾಜಿಕ ಕಳಕಳಿ ಹಾಗೂ ಸಾಮಾಜಿಕ ಸ್ಥಿತಿಗತಿಗಳ ಅರಿವು ಮೂಡಿಸುವ ಸಲುವಾಗಿ ತರಗತಿವಾರು ಸೇವಾ ಚಟುವಟಿಕೆಗಳಿಗೆ ಭೇಟಿ ನೀಡಿ ಸಂವಾದ ನಡೆಸುವ ಕಾರ್ಯಕ್ರಮ ವರ್ಷಪೂರ್ತಿ ನಡೆಯಿತು. ರಾಷ್ಟ್ರೋತ್ಥಾನ ಪರಿಷತ್ ನಡೆಸುವ ತಲೆಸ್ಸೆಮಿಯಾ, ಗೋಶಾಲೆ ಮುಂತಾದ ಚಟುವಟಿಕೆಗಳಿಗೆ ಯೋಗವಿಭಾಗದ ಹಲವು ತರಗತಿಗಳ ಯೋಗಾಭ್ಯಾಸಿಗಳು ಭೇಟಿ ನೀಡಿದರು. ತಲೆಸ್ಸೆಮಿಯಾ ಮಕ್ಕಳ ಆರೋಗ್ಯ ವಿಚಾರಿಸಿ, ಅವರಿಗೆ ಧೈರ್ಯ ತುಂಬಿ ಹಣ್ಣುಹಂಪಲು ವಿತರಿಸಿದರು.

**ರಕ್ತದಾನ ಶಿಬಿರ:** ಯೋಗಬಂಧುಗಳಲ್ಲಿ ಸಾಮಾಜಿಕ ಕಳಕಳಿ ಮೂಡಿಸುವ ಉದ್ದೇಶದಿಂದ ಕಳೆದ ಹಲವಾರು ವರ್ಷಗಳಿಂದ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಈ ವರ್ಷ ಯೋಗವಿಭಾಗದ 8 ಯೋಗಕೇಂದ್ರಗಳಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು. ಒಟ್ಟು 584 ಮಂದಿ ರಕ್ತದಾನ ಮಾಡಿದರು.

**ಅಂತರರಾಷ್ಟ್ರೀಯ ಯೋಗದಿನಾಚರಣೆ:** ಪ್ರತಿ ವರ್ಷ ರಾಷ್ಟ್ರೋತ್ಥಾನ ಯೋಗ ವಿಭಾಗದ ವತಿಯಿಂದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ವಿಶಿಷ್ಟ ರೂಪದಲ್ಲಿ ಆಚರಿಸಲಾಗುತ್ತಿತ್ತು. ಈ ವರ್ಷ ಕೊರೋನಾ ಕಾರಣದಿಂದ ಆನ್‌ಲೈನ್ ಮೂಲಕ ಜೂನ್ 21ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದರಾದ ತೇಜಸ್ವಿ ಸೂರ್ಯ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದರು. ರಾಷ್ಟ್ರೋತ್ಥಾನದ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಸಾಮೂಹಿಕ ಸೂರ್ಯನಮಸ್ಕಾರ, ಆಸನ ಹಾಗೂ ಪ್ರಾಣಾಯಾಮದ ಅಭ್ಯಾಸ ನಡೆಯಿತು. ಕಾರ್ಯಕ್ರಮಕ್ಕೆ ಮುನ್ನ ಕಾರ್ಯಕ್ರಮದಲ್ಲಿ ಅಭ್ಯಸಿಸುವ ಆಸನ–ಪ್ರಾಣಾಯಾಮಗಳನ್ನು ಮೊದಲೇ ಅಭ್ಯಾಸ ಮಾಡಲು ಅನುಕೂಲವಾಗಿಸುವ ಸಲುವಾಗಿ ಅವುಗಳನ್ನು ವಿಡಿಯೋ ರೆಕಾರ್ಡ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸಲಾಯಿತು. ಹತ್ತು ಸಾವಿರಕ್ಕೂ ಅಧಿಕ ಮಂದಿ ಫೇಸ್‌ಬುಕ್ ನೇರಪ್ರಸಾರ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

**ಲಾಕ್‌ಡೌನ್ ಸಂದರ್ಭದಲ್ಲಿ, ಉಚಿತ ಆನ್‌ಲೈನ್ ಯೋಗ ತರಗತಿಗಳು:** ಕೊರೊನಾ ತೀವ್ರತೆಯಿಂದಾಗಿ ಇಡೀ ದೇಶದಲ್ಲಿ ಸುಮಾರು 2 ತಿಂಗಳು (ಏಪ್ರಿಲ್–ಮೇ) ಲಾಕ್‌ಡೌನ್ ಘೋಷಿಸಲಾಗಿತ್ತು. ಈ ಸಂದರ್ಭದಲ್ಲಿ ಜನರಲ್ಲಿ ಆರೋಗ್ಯದ ಕುರಿತು ಜಾಗೃತಿ ಮೂಡಿಸುವ ಹಾಗೂ ಯೋಗಾಭ್ಯಾಸಕ್ಕೆ ನೆರವಾಗುವ ಸಲುವಾಗಿ ಫೇಸ್ ಬುಕ್ ಮೂಲಕ ಉಚಿತ ಯೋಗ ತರಗತಿಗಳನ್ನು ನಡೆಸಲಾಯಿತು. 2 ತಿಂಗಳ



ಕಾಲ ನಡೆದ ಈ ಯೋಗತರಗತಿಯಲ್ಲಿ ದೇಶ–ವಿದೇಶಗಳ 10,000ಕ್ಕೂ ಅಧಿಕ ಮಂದಿ ಜೋಡಿಸಿಕೊಂಡಿದ್ದರು. ಸಾವಿರಾರು ಯೋಗಾಭ್ಯಾಸಿಗಳು ಈ ಫೇಸ್‌ಬುಕ್ ಯೋಗತರಗತಿಗಳಿಂದ ತಮಗಾದ ಪ್ರಯೋಜನವನ್ನು ಹಂಚಿಕೊಂಡಿದ್ದಾರೆ.

## ವಿದ್ಯಾರ್ಥಿಗಳಿಗಾಗಿ

**ಮಕ್ಕಳ ಯೋಗ ತರಗತಿ:** ಮಕ್ಕಳ ದೈಹಿಕ ಹಾಗೂ ಮಾನಸಿಕ ವಿಕಾಸಕ್ಕಾಗಿ ಪ್ರತಿ ಭಾನುವಾರ ಜಯನಗರ, ಸದಾಶಿವನಗರ, ಕಲ್ಯಾಣನಗರ, ಕೇಶವಶಿಲ್ಪ ಯೋಗಕೇಂದ್ರಗಳಲ್ಲಿ 'ಮಕ್ಕಳ ವಾರಾಂತ್ಯದ ತರಗತಿ'ಗಳನ್ನು ನಡೆಸಲಾಗುತ್ತಿದೆ. ಇಲ್ಲಿ ಸೂರ್ಯನಮಸ್ಕಾರ, ಉಸಿರಾಟದ ವ್ಯಾಯಾಮ, ಆಟಗಳು, ಕಥೆ ಮುಂತಾದವುಗಳನ್ನು ಕಲಿಸಿಕೊಡಲಾಗುತ್ತದೆ. 100ಕ್ಕೂ ಹೆಚ್ಚು ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

## ಇತರ ಚಟುವಟಿಕೆಗಳು

### ನೃತ್ಯ–ಸಂಗೀತ ಕೇಂದ್ರ

ಸಂಗೀತಾಸಕ್ತರಿಗೆ ಸಂಗೀತದ ಕುರಿತು ತರಬೇತಿ ನೀಡುವ ಉದ್ದೇಶದಿಂದ ಜಯನಗರ (2013ರಲ್ಲಿ), ಸದಾಶಿವನಗರ (2016) ಮತ್ತು ರಾಷ್ಟ್ರೋತ್ಥಾನ ನೃತ್ಯ–ಸಂಗೀತ ಕೇಂದ್ರವನ್ನು ಪ್ರಾರಂಭಿಸಲಾಯಿತು. ತಬಲಾ, ವೀಣೆ, ಮೃದಂಗ, ಭರತನಾಟ್ಯ, ಸುಗಮಸಂಗೀತ, ಕರ್ನಾಟಕ ಸಂಗೀತ, ಕಥಕ್ ತರಗತಿಗಳು ನಡೆಯುತ್ತಿವೆ.

ಪ್ರಸ್ತುತ 165 ಮಂದಿ ಅಧಿಕ ಮಂದಿ ಸಂಗೀತ ನೃತ್ಯ ಕೇಂದ್ರದ ಪ್ರಯೋಜನ ಪಡೆಯುತ್ತಿದ್ದಾರೆ.



### ಫಿಟ್ನೆಸ್ ಸೆಂಟರ್

ಇಂದಿನ ಯಾಂತ್ರಿಕ ಮತ್ತು ವೇಗದ ಬದುಕಿನಿಂದ ಬದಲಾದ ಜೀವನಶೈಲಿಯಲ್ಲಿಯೂ ಸದೃಢ ದೇಹವನ್ನು ಹೊಂದುವ ಹಾಗೂ ಆರೋಗ್ಯವನ್ನು ಸುರಕ್ಷಿತವಾಗಿಡುವ ಕಳಕಳಿಯವರಿಗಾಗಿ ಆಧುನಿಕ ಜೀವನ ಶೈಲಿಗೆ ಸರಿಹೊಂದುವಂತಹ ಫಿಟ್ನೆಸ್ ಸೆಂಟರ್‌ನ್ನು ಜಯನಗರ, ಸದಾಶಿವನಗರ ಯೋಗಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಎಲ್ಲ ವಯೋಮಾನದವರು ಬೇರೆಬೇರೆ ಅವಧಿಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಜಯನಗರ (623 ಮಂದಿ) ಮತ್ತು ಸದಾಶಿವನಗರದಲ್ಲಿ (850) ಸೇರಿದಂತೆ ಒಟ್ಟು 1473 ಮಂದಿ ಪ್ರತಿನಿತ್ಯ ಇದರ ಪ್ರಯೋಜನ ಪಡೆಯುತ್ತಿದ್ದಾರೆ.

### ಕರಾಟೆ ತರಗತಿಗಳು

ಆತ್ಮರಕ್ಷಣೆ ಕಲೆಯಾದ ಕರಾಟೆಯ ತರಗತಿಗಳು ಜಯನಗರ ಕೇಂದ್ರದಲ್ಲಿ ನಡೆಯುತ್ತಿವೆ. ಸ್ಕೂಲ್ ಆಫ್ ಇಂಡಿಯನ್ ಕರಾಟೆಯ ಮಾಸ್ಟರ್ ಸುರೇಶ್ ಎಸ್. ರಾವ್ ಅವರ ಮಾರ್ಗದರ್ಶನದಲ್ಲಿ ಜಯನಗರ ಯೋಗಕೇಂದ್ರದಲ್ಲಿ ಕಳೆದ ಹಲವಾರು ವರ್ಷಗಳಿಂದ ಕರಾಟೆ ತರಗತಿಗಳು ನಡೆಯುತ್ತಿವೆ.

ಅನೇಕರು ವಿವಿಧ ಸ್ತರಗಳಲ್ಲಿ ಉತ್ತೀರ್ಣರಾಗಿ ವಿವಿಧ ಬೆಲ್ಟ್‌ಗಳನ್ನು ಪಡೆದಿದ್ದಾರೆ. ಪ್ರಸ್ತುತ 165 ಮಂದಿ ಪ್ರತಿನಿತ್ಯ ಕರಾಟೆ ಅಭ್ಯಾಸ ಮಾಡುತ್ತಿದ್ದಾರೆ.

### ರಾಷ್ಟ್ರೋತ್ಥಾನ ಅಂಗಮರ್ದನ ಚಿಕಿತ್ಸೆ ಮತ್ತು ಉಗಿಸ್ನಾನ ಚಿಕಿತ್ಸಾ ಕೇಂದ್ರ

ಜಯನಗರದಲ್ಲಿರುವ ಅಜಿತಸ್ಮೃತಿಯಲ್ಲಿ ಕಳೆದ 17 ವರ್ಷಗಳಿಂದ ರಾಷ್ಟ್ರೋತ್ಥಾನ ಅಂಗಮರ್ದನ ಮತ್ತು ಉಗಿಸ್ನಾನ ಚಿಕಿತ್ಸಾ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ 800 ಮಂದಿ ಅಂಗಮರ್ದನ ಮತ್ತು ಉಗಿಸ್ನಾನದ ಲಾಭವನ್ನು ಪಡೆದುಕೊಂಡಿದ್ದಾರೆ. ಪಾರ್ಶ್ವವಾಯು, ಪಾರ್ಕಿನ್ಸನ್, ಬೆನ್ನುನೋವು, ಗಂಟುನೋವು, ರಕ್ತದೊತ್ತಡ ಮುಂತಾದ ತೊಂದರೆಗಳಿಂದ ನರಳುತ್ತಿರುವವರೂ ಇದರ ಲಾಭಪಡೆದು, ತಮ್ಮ ದೈಹಿಕ ಬದಲಾವಣೆಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



# ರಾಷ್ಟ್ರೋತ್ಥಾನ ಗೋಶಾಲೆ

## ಭಾರತೀಯ ದೇಶಿ ತಳಿಗಳ ಸಂರಕ್ಷಣೆ ಮತ್ತು ಸಂವರ್ಧನೆ

ಅನಾದಿಕಾಲದಿಂದಲೂ ಭಾರತದಲ್ಲಿ ಗೋವಿಗೆ ಪೂಜ್ಯಸ್ಥಾನವನ್ನು ನೀಡಲಾಗಿದೆ. ಗೋವು ಕೇವಲ ಹಾಲು ಕೊಡುವ ಪ್ರಾಣಿಯಲ್ಲ. ಮಾನವ ಜೀವನದ ವಿಕಾಸದ ಪ್ರತಿಹಂತದಲ್ಲೂ ಗೋವಿಗೆ ಪ್ರಮುಖವಾದ ಸ್ಥಾನವನ್ನು ನೀಡಿ, ಅದನ್ನು ದೇವತೆಗಳ ಮೂಲಸ್ಥಾನ ಎಂದು ನಂಬಿದವರು ಭಾರತೀಯರು. ಆದರೆ ವಿದೇಶೀ ಮಾನಸಿಕತೆಯ ಪರಿಣಾಮದಿಂದಾಗಿ ಗೋವನ್ನು ಹಾಲು ಕೊಡುವ ಯಂತ್ರವಾಗಿ ಚಿತ್ರಿಸಲಾಗುತ್ತಿದೆ. ಈ ಮಾನಸಿಕತೆಯ ಭರಾಟೆಯಲ್ಲಿ ಗೋವಿನ ಮಹಾನತೆ ಮರೆಯಾಗುತ್ತಿದೆ. ಹಸುವನ್ನು ಕೇವಲ ಹಾಲಿನ ಮೂಲವೆಂದು ಪರಿಗಣಿಸಿ, ಭಾರತೀಯ ಗೋತಳಿಗಳನ್ನು ಅಲಕ್ಷಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ದೇಶೀಯ (ಭಾರತೀಯ) ತಳಿಗಳ ಸಂರಕ್ಷಣೆ, ಸಂವರ್ಧನೆ ಮತ್ತು ಸಂಶೋಧನೆಗಾಗಿ ದೊಡ್ಡಬಳ್ಳಾಪುರ ಸಮೀಪದ ಶ್ರೀ ಘಾಟಿಸುಬ್ರಹ್ಮಣ್ಯ ಕ್ಷೇತ್ರದ ತಪ್ಪಲಿನ 'ಶ್ರೀಮಾಧವ ಸೃಷ್ಟಿ'ಯಲ್ಲಿ ಗೋಶಾಲೆಯನ್ನು ನಡೆಸಿಕೊಂಡು ಬರುತ್ತಿದೆ.

- **ದೇಸೀ ತಳಿಗಳ ಸಂರಕ್ಷಣೆ:** ಗೋಪಾಲನೆಗೆ ಯೋಗ್ಯವಾದ ಈ ಪರಿಸರದಲ್ಲಿ ಗುಜರಾತಿನ ಗೀರ್, ಹರ್ಯಾಣದ ಸಾಹೀವಾಲ್, ರಾಜಸ್ಥಾನದ ಕಾಂಕ್ರಿಜ್, ರಾಜಸ್ಥಾನ–ಹರ್ಯಾಣದ ಕಾರ್‌ಪಾರ್ಕರ್, ಮಹಾರಾಷ್ಟ್ರದ ದೇವನಿ, ದಕ್ಷಿಣ ಒಳನಾಡಿನ ಹಳ್ಳಿಕಾರ್, ಮಲೆನಾಡಿನ ಗಿಡ್ಡ, ಹೊಂಗೋಲ್, ಜವಾರಿ, ಅಮೃತಮಹಲ್ ಸೇರಿದಂತೆ 10 ತಳಿಗಳ ಸಂರಕ್ಷಣೆ ಮಾಡಲಾಗುತ್ತಿದೆ.
- ಎತ್ತು, ಹೋರಿ, ದನ ಹಾಗೂ ಕರುಗಳು ಸೇರಿದಂತೆ ಒಟ್ಟು 650ಕ್ಕೂ ಅಧಿಕ ಜಾನುವಾರುಗಳಿಗೆ ಆಶ್ರಯ ನೀಡಲಾಗಿದೆ.
- **ತಳಿಗಳ ಅಭಿವೃದ್ಧಿ:** ದೇಶೀ ತಳಿಗಳ ಅಭಿವೃದ್ಧಿಗೆ ವಿಶೇಷ ಪ್ರಯತ್ನ ನಡೆಸಲಾಗುತ್ತಿದೆ. ದೇಶಿ ಗೋವುಗಳ ರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತಿರುವ ಗೋಶಾಲೆಗಳಿಗೆ ಅಗತ್ಯ ನೆರವು ನೀಡಲು ನಿರ್ಧರಿಸಿದೆ. ಇದರ ಪ್ರಾರಂಭಿಕ ಹಂತವಾಗಿ ತಳಿ ಅಭಿವೃದ್ಧಿಗಾಗಿ ಅನೇಕ ಗೋಶಾಲೆಗಳಿಗೆ ದೇಶಿ ಹೋರಿಯನ್ನು ನೀಡಲಾಗುತ್ತಿದೆ. ಈ ವರ್ಷ 7 ಉತ್ತಮ ಗುಣಮಟ್ಟದ ಹೋರಿಗಳನ್ನು ರಾಜ್ಯದ ವಿವಿಧ ಗೋಶಾಲೆಗಳಿಗೆ ನೀಡಲಾಗಿದೆ.
- ಸಗಣಿಯನ್ನು ಬಳಸಿ ಕಾಂಪೋಸ್ಟ್, ಎರೆಗೊಬ್ಬರ ಹಾಗೂ ಅಗ್ನಿಹೋತ್ರಗಳನ್ನು ತಯಾರಿಸಲಾಗುತ್ತಿದೆ. ಸುತ್ತಮುತ್ತಲಿನ ರೈತರಿಗೆ ನೀಡಲಾಗುತ್ತಿದೆ.
- ಗೋಸಾಕಣೆ, ಹೈನುಗಾರಿಕೆ, ಸಾವಯವ ಕೃಷಿ, ಪ್ರಕೃತಿಚಿಕಿತ್ಸೆ – ಇವುಗಳಲ್ಲಿ ಸಮನ್ವಯ ಸಾಧಿಸುವ ಕಾರ್ಯಯೋಜನೆ ರೂಪಿಸಲಾಗಿದೆ.
- **ಸ್ವಾವಲಂಬೀ ವಿದ್ಯುತ್ ವ್ಯವಸ್ಥೆ:** ಗೋಶಾಲೆಯಲ್ಲಿ ಸೌರಶಕ್ತಿ ಮತ್ತು ಗೋಬರ್ ಗ್ಯಾಸ್ ಬಳಕೆಗೆ ಆದ್ಯತೆ ನೀಡಲಾಗುತ್ತಿದೆ. ಎಲ್ಲ ಬೋರ್‌ವೆಲ್‌ಗಳಿಗೆ ಸೌರವಿದ್ಯುತ್ ಅಳವಡಿಸಲಾಗಿದೆ. ಗೋಶಾಲೆಗಳ ಬೆಳಕಿನ ವ್ಯವಸ್ಥೆ ಸಂಪೂರ್ಣ ಸೌರಶಕ್ತಿಯಿಂದಲೇ ನಡೆಯುತ್ತಿದೆ.
- ಎರೆಗೊಬ್ಬರ ಘಟಕದ ಮೂಲಕ ಎರೆಗೊಬ್ಬರ ತಯಾರಿಸಲಾಗುತ್ತಿದೆ. ಸುತ್ತಮುತ್ತಲಿನ ರೈತರಿಗೆ ಈ ಎರೆಗೊಬ್ಬರವನ್ನು ನೀಡಲಾಗುತ್ತಿದೆ. 22 ತೊಟ್ಟಿಗಳಿರುವ ಎರೆಗೊಬ್ಬರ ಘಟಕ ಕಾರ್ಯ ನಿರ್ವಹಿಸುತ್ತಿದೆ.
- ಗೋಶಾಲೆಯಲ್ಲಿ ಗೋಮೂತ್ರ ಅರ್ಕ, ಧೂಪ, ಜೀವಾಮೃತ, ಘನ ಜೀವಾಮೃತ, ಕೀಟ ನಿಯಂತ್ರಕ, ಬರಣಿ, ದಂತಮಜ್ಜನ, ಗೋಚೂರ್ಣ, ಗೋಮಯ ಭಸ್ಮಗಳನ್ನು ತಯಾರಿಸಿ ರೈತರಿಗೆ ಕಡಮೆ ದರದಲ್ಲಿ ಮಾರಾಟ ಮಾಡುವ ಗುರಿಯಿಂದ ಕಾರ್ಯ ಪ್ರಾರಂಭಿಸಲಾಗಿದೆ.
- **ಉಚಿತ ಹೋರಿ/ಎತ್ತು ವಿತರಣೆ:** ಸುತ್ತಮುತ್ತಲಿನ ಹಳ್ಳಿಗಳ ರೈತರಿಗೆ ನೆರವಾಗುವ ಉದ್ದೇಶದಿಂದ ಉಚಿತ ಹೋರಿ ಹಾಗೂ ಎತ್ತುಗಳನ್ನು ನೀಡುವ ಯೋಜನೆ ಹಮ್ಮಿಕೊಳ್ಳಲಾಗಿದೆ. 2011ರಲ್ಲಿ ಪ್ರಾರಂಭಗೊಂಡ ಈ ಯೋಜನೆಯಲ್ಲಿ ಈವರೆಗೆ 263 ಜೊತೆ ಹೋರಿ/ಎತ್ತುಗಳನ್ನು ರೈತರಿಗೆ ವಿತರಿಸಲಾಗಿದೆ. ಈ ವರ್ಷ ಒಟ್ಟು 43 ಜೊತೆ ಹೋರಿ/ಎತ್ತುಗಳನ್ನು ರೈತರಿಗೆ (ಮಂಡ್ಯ, ದೊಡ್ಡಬಳ್ಳಾಪುರ, ಗೌರಿಬಿದನೂರು, ಪಾಂಡವಪುರ, ಮೇಲುಕೋಟೆ, ಹಿರಿಯೂರು, ಮದ್ದೂರು ಮುಂತಾದ ಗ್ರಾಮೀಣ ಭಾಗದವರಿಗೆ) ನೀಡಲಾಗಿದೆ. ರೈತರು ತಮ್ಮ ಗದ್ದೆಗಳ ಉಳುಮೆಗಾಗಿ ಇವುಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಆರೈಕೆ ಮಾಡಲು ಅಸಾಧ್ಯವಾದಾಗ ಪುನಃ ಗೋಶಾಲೆಗೆ ಹಿಂತಿರುಗಿಸಬೇಕು. ಯಾವುದೇ ಕಾರಣಕ್ಕೂ ಮಾರಾಟ ಮಾಡುವಂತಿಲ್ಲ ಎಂಬ ಒಪ್ಪಂದದ ಮೇರೆಗೆ ಇವುಗಳನ್ನು ನೀಡಲಾಗುತ್ತಿದೆ.



- ಗೋಶಾಲೆಯಲ್ಲಿನ ಗೋ ಸಾಕಣೆಯ ಕುರಿತು ರಾಜ್ಯದ ವಿವಿಧ ಭಾಗಗಳ ರೈತರು ಹಾಗೂ ಹೈನುಗಾರಿಕಾ ಇಲಾಖೆಯವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.
- ರಾಜ್ಯದ ವಿವಿಧೆಡೆಗಳಲ್ಲಿ ನಡೆಯುವ ಗೋಶಾಲೆ ಸಂಬಂಧಿತ ಕಾರ್ಯಾಗಾರ, ಉತ್ಸವಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಲಾಗುತ್ತಿದೆ.
- 40 ಮಂದಿ ಗೋಪಾಲಕರು ಕೆಲಸ ನಿರ್ವಹಿಸುತ್ತಿದ್ದಾರೆ.

**ಉತ್ಸವಗಳು :** ಗೋಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರಲ್ಲಿ ಸಹೋದರತೆ ಮೂಡಿಸುವ ಹಾಗೂ ನಮ್ಮ ಪರಂಪರೆ ಸಂಸ್ಕೃತಿಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಶ್ರೀರಾಮನವಮಿ, ರಕ್ಷಾಬಂಧನ, ಕೃಷ್ಣಜನ್ಮಾಷ್ಟಮಿ, ಗಣೇಶಚತುರ್ಥಿ, ಆಯುಧಪೂಜೆ, ದೀಪಾವಳಿ, ಮಕರಸಂಕ್ರಾಂತಿ, ಯುಗಾದಿಮುಂತಾದ ಉತ್ಸವಗಳನ್ನು ನಿರಂತರವಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

## ವೃಂದಾವನ – ಕಾಡು ಬೆಳೆಸುವ ವಿಶೇಷ ಯೋಜನೆ

ಭೂಮಿ, ಕಾಡು ಮತ್ತು ದೇಶಿ ಗೋವುಗಳ ನಡುವೆ ಅವಿನಾಭಾವ ಸಂಬಂಧವಿದೆ. ಈ ವಾಸ್ತವದ ಆಧಾರದ ಮೇಲೆ ಗೋಶಾಲೆಯ 20 ಎಕರೆ ಪರಿಸರದಲ್ಲಿ ಕಾಡನ್ನು ಬೆಳೆಸುವ 'ವೃಂದಾವನ' ಎಂಬ ಯೋಜನೆಯನ್ನು ರಾಷ್ಟ್ರೋತ್ಥಾನ ಪರಿಷತ್ 2018ರಲ್ಲಿ ಪ್ರಾರಂಭಿಸಿದೆ.

- ಸುಪ್ರಸಿದ್ಧ ಮಾಕಳಿ ಗುಡ್ಡದ ಸಾಮೀಪ್ಯದ 40 ಎಕರೆ ಜಾಗದಲ್ಲಿ 4 ಪರಿಕಲ್ಪನೆಯಲ್ಲಿ (ಮಹಾನವ, ತಪೋವನ, ಶ್ರೀವನ ಹಾಗೂ ವಸುಧೈವ ಕುಟುಂಬಕಂ) ಕಾಡು ನಿರ್ಮಾಣದ ಯೋಜನೆ ಇದಾಗಿದೆ.
- ಖ್ಯಾತ ಪರಿಸರ ತಜ್ಞ ಡಾ. ಯಲ್ಲಪ್ಪ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಈ ಯೋಜನೆ ಪ್ರಾರಂಭವಾಯಿತು.
- ಔಷಧೀಯ, ಆಯುರ್ವೇದೀಯ ಗುಣಗಳಿರುವ ಸಾಂಪ್ರದಾಯಿಕ ಸ್ಥಳೀಯ ಪ್ರಾಣಿಪಕ್ಷಿಸಂಕುಲಕ್ಕೆ ಪೂರಕ ಸಸ್ಯಗಳನ್ನು ಇಲ್ಲಿ ನೆಡಲಾಗುತ್ತದೆ.
- ಸಂಪೂರ್ಣ ಸೋಲಾರ್ ಶಕ್ತಿಯನ್ನು ಬಳಸಿ ನೀರಾವರಿ ವ್ಯವಸ್ಥೆ. ಹನಿ ನೀರು ವ್ಯರ್ಥವಾಗದಂತೆ ಜಲಸಂರಕ್ಷಣೆಯ ಯೋಜನೆ ರೂಪಿಸಲಾಗಿದೆ.
- ಪ್ರಾರಂಭಿಕ ಹಂತವಾಗಿ 5 ಎಕರೆ ಜಾಗದಲ್ಲಿ 'ಮಹಾವನ' ರೂಪುಗೊಳ್ಳಲಿದ್ದು, ಈಗಾಗಲೇ 3000ಕ್ಕೂ ಅಧಿಕ ಗಿಡಗಳನ್ನು ನೆಡಲಾಗಿದೆ.



- ಈ ವರ್ಷ ಗಿಡನೆಡುವ ಕಾರ್ಯಕ್ರಮದಲ್ಲಿ ಹಲವು ಸ್ವಯಂಸೇವಾ ಸಂಸ್ಥೆಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದರು. ಬೆಂಗಳೂರಿನ ಗ್ಲೋಬಲ್ ಎಡ್ಜ್ ಸಾಫ್ಟ್‌ವೇರ್ ಕಂಪೆನಿಯು 400 ಶ್ರೀಗಂಧ ಹಾಗೂ ಹಣ್ಣಿನ ಗಿಡಗಳು, ಸೇವಕ್ ಸಮುದಾಯದ ಕಾರ್ಯಕರ್ತರು 30 ಹಣ್ಣಿನ ಗಿಡಗಳು ಹಾಗೂ ದೊಡ್ಡಬಳ್ಳಾಪುರದ ಮಹಿಳಾ ಸಮಾಜ ಪದಾಧಿಕಾರಿಗಳು ಹತ್ತು ತೆಂಗಿನ ಗಿಡಗಳನ್ನು ಈ ಯೋಜನೆಗೆ ನೀಡಿದ್ದಾರೆ. ಸಾಮಾಜಿಕ ಕಾರ್ಯಕರ್ತ ಅಶ್ವಿನ್ ಕೆ. ಪ್ರಜ್ಞಾ ಅವರು ತಮ್ಮ ಮಗಳ ನಾಮಕರಣ ಕಾರ್ಯಕ್ರಮವನ್ನು ಗೋಶಾಲೆಯಲ್ಲಿ ಆಯೋಜಿಸಿ, ವೃಂದಾವನದಲ್ಲಿ 70 ಗಿಡಗಳನ್ನು ನೆಟ್ಟರು.

# ಶೈಕ್ಷಣಿಕ ಸಂಸ್ಥೆಗಳು

ಸಾಮಾಜಿಕ ವ್ಯವಸ್ಥೆಯ ಉಪಕ್ರಮದ ಮೇಲೆ ಪ್ರಭಾವ ಬೀರಬಲ್ಲ ಬಹುಪ್ರಮುಖ ಅಂಗ ಶೈಕ್ಷಣಿಕ ಕ್ಷೇತ್ರ. ಸುಶಿಕ್ಷಿತ, ಸುಸಂಸ್ಕೃತ ಸಮಾಜದ ನಿರ್ಮಾಣಕ್ಕಾಗಿಯೇ ಹುಟ್ಟಿಕೊಂಡ ರಾಷ್ಟ್ರೋತ್ಥಾನ ಪರಿಷತ್, ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಹೆಸರಿನಲ್ಲಿ ಮಹತ್ತ್ವದ ಮೈಲಿಗಲ್ಲುಗಳನ್ನಿಡುತ್ತಿದೆ. ವಿದ್ಯಾರ್ಥಿಗಳನ್ನು ಸಮರ್ಥ, ಸುಯೋಗ್ಯ ನಾಗರಿಕರನ್ನಾಗಿ ರೂಪಿಸುವ ಉದ್ದೇಶದಿಂದ 1972ರಲ್ಲಿ ಒಳ್ಳಾರಿಯ ಹಗರಿಬೊಮ್ಮನ ಹಳ್ಳಿಯಲ್ಲಿ ಶಿಶುಮಂದಿರದೊಂದಿಗೆ ಪ್ರಾರಂಭಗೊಂಡ ಪರಿಷತ್‌ನ ಶೈಕ್ಷಣಿಕ ಚಟುವಟಿಕೆಗಳು ಇಂದು 20 ಶಿಶುಮಂದಿರಗಳು, 11 ಪ್ರಾಥಮಿಕ ಶಾಲೆಗಳು, 9 ಪ್ರೌಢಶಾಲೆ ಹಾಗೂ ಒಂದು ವಸತಿ ಶಾಲೆಯೂ ಸೇರಿದಂತೆ ಒಟ್ಟು 6 ಕೇಂದ್ರೀಯ ಪಠ್ಯಕ್ರಮಾಧಾರಿತ (CBSE) ಶಾಲೆ ಹಾಗೂ 2 ಪದವಿಪೂರ್ವ ಕಾಲೇಜುಗಳ ಮೂಲಕ ರಾಜ್ಯಾದ್ಯಂತ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದೆ.



## ಶಿಶುಮಂದಿರಗಳು

| ಕ್ರ.ಸಂ | ಶಿಶುಮಂದಿರಗಳು | ಸಂಖ್ಯೆ |
|---|---|---|
| 1 | ರಾಷ್ಟ್ರೋತ್ಥಾನ ಶಿಶುಮಂದಿರ, ಕೆರೂರು ಗ್ರಾಮಾಂತರ | 1 |
| 2 | ರಾಷ್ಟ್ರೋತ್ಥಾನ ಶಿಶುಮಂದಿರ, ಧಾರವಾಡ ಗ್ರಾಮಾಂತರ | 5 |
| 3 | ರಾಷ್ಟ್ರೋತ್ಥಾನ ಶಿಶುಮಂದಿರ, ಹುಬ್ಬಳ್ಳಿ | 1 |
| 4 | ರಾಷ್ಟ್ರೋತ್ಥಾನ ಶಿಶುಮಂದಿರ, ದಾವಣಗೆರೆ | 1 |
| 5 | ಶಾರದಾ ಶಿಶುಮಂದಿರ, ಹಗರಿಬೊಮ್ಮನಹಳ್ಳಿ | 1 |
| 6 | ಸರಸ್ವತಿ ಶಿಶುಮಂದಿರ, ಹಗರಿಬೊಮ್ಮನಹಳ್ಳಿ | 1 |
| 7 | ಜ್ಞಾನಭಾರತಿ ಶಿಶುಮಂದಿರ, ಚಿತ್ರದುರ್ಗ | 1 |
| 8 | ಲಯನ್ಸ್ ಸೇವಾಭಾರತಿ ಶಿಶುಮಂದಿರ, ಬೆಂಗಳೂರು | 1 |
| 9 | ಸಾಂದೀಪನ ಶಿಶುಮಂದಿರ, ಬೆಂಗಳೂರು | 1 |
| 10 | ರಾಷ್ಟ್ರೋತ್ಥಾನ ಶಿಶುಮಂದಿರ, ಹೊಳೆಹೊನ್ನೂರು & ಗ್ರಾಮಾಂತರ | 6 |
| 11 | ಜೈ ಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ಶಿಶುಮಂದಿರ, ಬೆಂಗಳೂರು | 1 |
| | **ಒಟ್ಟು ಸಂಖ್ಯೆ** | **20** |

## ರಾಷ್ಟ್ರೋತ್ಥಾನ ಪರಿಷತ್ತಿನ ಕೇಂದ್ರ ಪಠ್ಯಕ್ರಮ ಶಾಲೆಗಳು

1 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಧಾರವಾಡ (ಗಂಡು ಮಕ್ಕಳ ವಸತಿ ಶಾಲೆ)
2 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಥಣಿಸಂದ್ರ, ಬೆಂಗಳೂರು
3 ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ರಾಮಮೂರ್ತಿನಗರ, ಬೆಂಗಳೂರು
4 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಬನಶಂಕರಿ, ಬೆಂಗಳೂರು
5 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹಗರಿಬೊಮ್ಮನಹಳ್ಳಿ
6 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ದಾವಣಗೆರೆ

## ರಾಜ್ಯ ಪಠ್ಯಕ್ರಮ ಪ್ರಾಥಮಿಕ ಶಾಲೆಗಳು

1. ರಾಮಕೃಷ್ಣ ವಿದ್ಯಾಮಂದಿರ, ಕೆರೂರು
2. ರಾಷ್ಟ್ರೋತ್ಥಾನ ವಿದ್ಯಾಲಯ, ಧಾರವಾಡ
3. ರಾಷ್ಟ್ರೋತ್ಥಾನ ವಿದ್ಯಾಲಯ, ದಾವಣಗೆರೆ
4. ರಾಷ್ಟ್ರೋತ್ಥಾನ ಹಿರಿಯ ಪ್ರಾಥಮಿಕ ಶಾಲೆ, ಹಗರಿಬೊಮ್ಮನಹಳ್ಳಿ
5. ರಾಷ್ಟ್ರೋತ್ಥಾನ ವಿದ್ಯಾಲಯ, ಹೊಳೆಹೊನ್ನೂರು
6. ಸಾಂದೀಪನ ವಿದ್ಯಾಭವನ, ಶ್ರೀರಾಂಪುರ, ಬೆಂಗಳೂರು
7. ಲಯನ್ಸ್ ಸೇವಾಭಾರತಿ ವಿದ್ಯಾಲಯ, ಉಲ್ಲಾಳು ಉಪನಗರ, ಬೆಂಗಳೂರು
8. ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಲಯ, ಕಲ್ಯಾಣನಗರ, ಬೆಂ.
9. ಜ್ಞಾನಭಾರತಿ ವಿದ್ಯಾಮಂದಿರ, ಚಿತ್ರದುರ್ಗ
10. ಶಾರದಾ ಆಂಗ್ಲ ಮಾಧ್ಯಮಿಕ ವಿದ್ಯಾಲಯ, ಹಗರಿಬೊಮ್ಮನಹಳ್ಳಿ
11. ರಾಷ್ಟ್ರೋತ್ಥಾನ ವಿದ್ಯಾಲಯ, ಮುಂಗಾನಹಳ್ಳಿ

## ರಾಜ್ಯ ಪಠ್ಯಕ್ರಮ ಪ್ರೌಢಶಾಲೆಗಳು

1. ರಾಷ್ಟ್ರೋತ್ಥಾನ ಪ್ರೌಢಶಾಲೆ, ಹಗರಿಬೊಮ್ಮನಹಳ್ಳಿ
2. ರಾಷ್ಟ್ರೋತ್ಥಾನ ಪ್ರೌಢಶಾಲೆ, ದಾವಣಗೆರೆ
3. ರಾಷ್ಟ್ರೋತ್ಥಾನ ಪ್ರೌಢಶಾಲೆ, ಹೊಳೆಹೊನ್ನೂರು
4. ಪತ್ತಿ ಆದಿನಾರಾಯಣಯ್ಯ ರಾಮಲಕ್ಷ್ಮಮ್ಮ ಪ್ರೌಢಶಾಲೆ, ಮುಂಗಾನಹಳ್ಳಿ, (ಚಿಂತಾಮಣಿ) (2)
5. ಶಾರದಾ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಹಗರಿಬೊಮ್ಮನಹಳ್ಳಿ
6. ಜ್ಞಾನಭಾರತಿ ವಿದ್ಯಾಮಂದಿರ, ಚಿತ್ರದುರ್ಗ
7. ಸಾಂದೀಪನ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಶ್ರೀರಾಂಪುರ, ಬೆಂಗಳೂರು
8. ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ಪ್ರೌಢಶಾಲೆ, ಕಲ್ಯಾಣನಗರ, ಬೆಂಗಳೂರು
9. ಶ್ರೀ ಬೀರೇಶ್ವರ ಗ್ರಾಮಾಂತರ ಪ್ರೌಢಶಾಲೆ, ಅಬ್ಬೂರುದೊಡ್ಡಿ, ಚನ್ನಪಟ್ಟಣ

## ಪದವಿಪೂರ್ವ ಕಾಲೇಜುಗಳು

1. ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜು, ಹಗರಿಬೊಮ್ಮನಹಳ್ಳಿ
2. ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜು, ಥಣಿಸಂದ್ರ

## ಸಂಕಲ್ಪನಾ 2020

ಭಾರತವನ್ನು ಸರ್ವರೀತಿಗಳಲ್ಲಿಯೂ ಪರಮ ವೈಭವ ಸ್ಥಿತಿಗೆ ಕೊಂಡೊಯ್ಯುವುದರಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರ ಪಾತ್ರ ಮಹತ್ತ್ವದ್ದು ಎಂಬುದನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರೋತ್ಥಾನ ಪರಿಷತ್ 'ಸಂಕಲ್ಪನಾ' ಎಂಬ ಹೆಸರಿನಲ್ಲಿ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದೆ.

### ಅ) ಶಿಕ್ಷಕರಿಗಾಗಿ

ಶಿಕ್ಷಕರಿಗೆ ಕಾರ್ಯಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹಾಗೂ ಗುಣಮಟ್ಟವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ಪರಿಣಾಮಕಾರಿಯಾಗಿಸುವ ಸಲುವಾಗಿ ಶಿಕ್ಷಕರಿಗಾಗಿ ವಿವಿಧ ಕಾರ್ಯಾಗಾರ, ಪ್ರಶಿಕ್ಷಣ ವರ್ಗಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**ಮುಖ್ಯ ಶಿಕ್ಷಕರ ಬೈಠಕ್:** ಕೊರೋನಾ ನಡುವೆಯೂ ವಿದ್ಯಾರ್ಥಿಗಳ ವಿಕಾಸಕ್ಕಾಗಿ ಶಾಲೆಗಳು ಕಾರ್ಯನಿರ್ವಹಿಸಬೇಕು ಎಂಬ ಕಾಳಜಿಯಿಂದ ಪ್ರತೀ ತಿಂಗಳು ನಿರಂತರವಾಗಿ ಆನ್‌ಲೈನ್ ಮೂಲಕ ಮುಖ್ಯಶಿಕ್ಷಕರ ಬೈಠಕ್ ನಡೆಸಲಾಯಿತು. ಬೈಠಕ್‌ನಲ್ಲಿ ರಾಜ್ಯ ಪಾಠ್ಯಕ್ರಮ ಶೈಕ್ಷಣಿಕ ಕ್ರಿಯಾ ಸಮಿತಿಯ ಸಂಚಾಲಕ ರಾಜಾರಾಂ ಅವರು ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು.

- ಜೂನ್ 10ರಂದು ನಡೆದ ಮುಖ್ಯ ಶಿಕ್ಷಕರ ಬೈಠಕ್‌ನಲ್ಲಿ 2019–20ನೇ ಸಾಲಿನ ಶಾಲೆಗಳಲ್ಲಿ ಅಂತರಿಕ ಅವಲೋಕನ, ವಿದ್ಯಾರ್ಥಿಗಳ ಫಲಿತಾಂಶ, ಶಿಕ್ಷಕರ ಸಾಮರ್ಥ್ಯವರ್ಧನೆ ಚಟುವಟಿಕೆಗಳಿಂದ ಶಿಕ್ಷಕರಲ್ಲಾದ ವೈಯಕ್ತಿಕ ಹಾಗೂ ವೃತ್ತಿಪರ ಬೆಳವಣಿಗೆ ಹಾಗೂ ಮುಂದಿನ ಶೈಕ್ಷಣಿಕ ವರ್ಷದ ಯೋಜನೆಗಳು–ಕಾರ್ಯಾನ್ವಯದ ಕುರಿತು ಚರ್ಚಿಸಲಾಯಿತು.



- ಜೂನ್ 18ರಂದು ನಡೆದ ಮುಖ್ಯ ಶಿಕ್ಷಕರ ಬೈಠಕ್‌ನಲ್ಲಿ ಸಮಾಜ ಜಾಗೃತಿಗೆ ಶಿಕ್ಷಕನ ಪಾತ್ರ, ಪರಿಣಾಮಕಾರಿ ಬೋಧನೆ, ಬೋಧನೋಪಕರಣಗಳ ಸಿದ್ಧತೆ, ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಗಣಕಯಂತ್ರದ ತರಬೇತಿ, ಶಿಕ್ಷಕರ ಸ್ವಯಂಕಲಿಕೆ, ದೂರವಾಣಿ ಮೂಲಕ ಮಕ್ಕಳ ಬೆಳವಣಿಗೆ–ಸಂಸ್ಕಾರದ ಕುರಿತು ಪರಾಮರ್ಶೆ, ವಿದ್ಯಾರ್ಥಿಗಳ ಸಾಮರ್ಥ್ಯವೃದ್ಧಿ–ಮೌಲ್ಯಮಾಪನ ಮುಂತಾದ ವಿಷಯಗಳ ಕುರಿತು ಚರ್ಚಿಸಲಾಯಿತು.
- 2020ರ ಜುಲೈ 27ರಂದು ನಡೆದ ಮುಖ್ಯ ಶಿಕ್ಷಕರ ಬೈಠಕ್‌ನಲ್ಲಿ ರಾಷ್ಟ್ರೋತ್ಥಾನದ ರಾಜ್ಯ ಪಾಠ್ಯಕ್ರಮ ಶಾಲೆಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಲಾಯಿತು. ನಡೆದ ಕಾರ್ಯಕ್ರಮಗಳು, ಹೊಸ ಶಿಕ್ಷಕರ ನೇಮಕಾತಿ, ವಿದ್ಯಾರ್ಥಿಗಳ ದಾಖಲಾತಿ, ಆನ್‌ಲೈನ್ ತರಗತಿ ಹಾಗೂ ಪ್ರೇರಣಾದಾಯಕ ಅಂಶಗಳ ಕುರಿತು ಚರ್ಚಿಸಲಾಯಿತು.
- ಜುಲೈ 6ರಂದು ನಡೆದ ಮುಖ್ಯಶಿಕ್ಷಕರ ಬೈಠಕ್‌ನಲ್ಲಿ ಶಾಲೆಯ ಸಂಕ್ಷಿಪ್ತ ವರದಿ, ವಿಷಯವಾರು ಪಠ್ಯಪುಸ್ತಕಗಳ ಬೋಧನೆಗೆ ಯೋಜನೆ, ಸಮಾಜದೊಂದಿಗೆ ಶಾಲೆಯ ಸಂಪರ್ಕ, ಸ್ವದೇಶಿ ವಸ್ತುಗಳ ಬಳಕೆಯ ಕುರಿತು ಮಕ್ಕಳಲ್ಲಿ ಜಾಗೃತಿ ಮೂಡಿಸುವುದು ಮುಂತಾದ ವಿಷಯಗಳ ಕುರಿತು ಚರ್ಚಿಸಲಾಯಿತು.
- ಆಗಸ್ಟ್ 8, 2020ರಂದು ನಡೆದ ಮುಖ್ಯ ಶಿಕ್ಷಕರ ಬೈಠಕ್‌ನಲ್ಲಿ ದಾಖಲಾತಿ ಸಂಬಂಧಿಸಿದಂತೆ ವರದಿ, ಶಿಕ್ಷಕರ ಪ್ರಶಿಕ್ಷಣ ವರ್ಗಗಳು, ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಬೇಕು. ಬದಲಾದ ಸನ್ನಿವೇಶಕ್ಕೆ ನಮ್ಮ ತಯಾರಿ, ಅದಕ್ಕೆ ನಾವು ಹೇಗೆ ಹೊಂದಿಕೊಂಡು ಹೋಗಬೇಕೆಂದು ಹಾಗೂ ಹೊಸ ಪಠ್ಯಕ್ರಮಕ್ಕನುಗುಣವಾಗಿ ನಮ್ಮ ಯೋಜನೆ ಮುಂತಾದ ವಿಷಯಗಳ ಕುರಿತು ಚರ್ಚೆ ನಡೆಸಲಾಯಿತು.
- ಆಗಸ್ಟ್ 26ರಂದು ನಡೆದ ಮುಖ್ಯ ಶಿಕ್ಷಕರ ಬೈಠಕ್‌ನಲ್ಲಿ ಹತ್ತನೇ ತರಗತಿಯ ಫಲಿತಾಂಶ ಉತ್ತಮಪಡಿಸುವುದು, ಆನ್‌ಲೈನ್ ತರಗತಿ, ಸ್ವಾತಂತ್ರ್ಯೋತ್ಸವ, ಆಯಾ ಶಾಲಾಮಟ್ಟದಲ್ಲಿ ಶಿಕ್ಷಕರ ಪ್ರಶಿಕ್ಷಣ ವರ್ಗ ಮುಂತಾದ ವಿಷಯಗಳ ಬಗೆಗೆ ಚರ್ಚಿಸಲಾಯಿತು.

- ಡಿ. 26ರಂದು ನಡೆದ ಬೈಠಕ್‌ನಲ್ಲಿ ಶಾಲಾವಾರು ಶಿಕ್ಷಕರ ಅವಲೋಕನ ಬೈಠಕ್, ಶಾಲಾಪ್ರಾರಂಭಕ್ಕೆ ಅಗತ್ಯ ಸುರಕ್ಷಾ ಸೌಲಭ್ಯಗಳನ್ನು ಒದಗಿಸುವುದು, ಶ್ರೀರಾಮಮಂದಿರದ ನಿಧಿ ಸಂಗ್ರಹ – ಮುಂತಾದ ವಿಷಯಗಳ ಕುರಿತು ಚರ್ಚಿಸಲಾಯಿತು.

- ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ 2020ರ ಅಕ್ಟೋಬರ್ 17ರಂದು ಮುಖ್ಯ ಶಿಕ್ಷಕರ ಬೈಠಕ್ ನಡೆಯಿತು. ವಿದ್ಯಾರ್ಥಿಗಳ ದಾಖಲಾತಿ, ಆನ್‌ಲೈನ್ ತರಗತಿ, ಶಿಕ್ಷಣಕ್ಕೆ ನಡೆಸಿದ ವಿಶೇಷ ಪ್ರಯತ್ನ, ವಿಷಯವಾರು ಶಿಕ್ಷಕರ ಬೈಠಕ್ ಮುಂತಾದವುಗಳ ಕುರಿತು ಚರ್ಚೆ ನಡೆಸಲಾಯಿತು. ರಾಜ್ಯ ಪಠ್ಯಕ್ರಮ ಶೈಕ್ಷಣಿಕ ಕ್ರಿಯಾ ಸಮಿತಿಯ ಸಂಚಾಲಕ ರಾಜಾರಾಂ ಉಪಸ್ಥಿತರಿದ್ದರು.

- ಮುಂದಿನ ವರ್ಷದ ಯೋಜನೆ ಹಾಗೂ ಈಗಾಗಲೇ ನಡೆದಿರುವ ಕಾರ್ಯಚಟುವಟಿಕೆಗಳ ಅವಲೋಕನಕ್ಕಾಗಿ 2021ರ ಫೆಬ್ರುವರಿ 6ರಂದು ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಮುಖ್ಯ ಶಿಕ್ಷಕರ ಬೈಠಕ್ ನಡೆಯಿತು. ರಾಜ್ಯ ಪಾಠ್ಯಕ್ರಮ ಶಾಲೆಗಳ ಎಲ್ಲ ಮುಖ್ಯ ಶಿಕ್ಷಕರು ಭಾಗವಹಿಸಿದ್ದರು. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಕೈಗೊಳ್ಳಬಹುದಾದ ಕಾರ್ಯಗಳು, ಮುಂದಿನ 2025ರ ಕಾರ್ಯಯೋಜನೆ, 10ನೇ ತರಗತಿಗೆ ತರಬೇತಿ, ಆನ್‌ಲೈನ್ ತರಗತಿಗಳ ಅವಲೋಕನ, ಶಿಕ್ಷಕರ ಸಾಮರ್ಥ್ಯವರ್ಧನೆಗೆ ಕೈಗೊಂಡ ಚಟುವಟಿಕೆಗಳು, ಸ್ವಸ್ಥ ಸುಸ್ಥಿರ ಸಮಾಜದ ನಿರ್ಮಾಣಕ್ಕೆ ನಮ್ಮ ಶಾಲೆಯ ಪಾತ್ರದ ಕುರಿತು ಚರ್ಚೆ ನಡೆಸಲಾಯಿತು. ರಾಜ್ಯ ಪಠ್ಯಕ್ರಮ ಶೈಕ್ಷಣಿಕ ಕ್ರಿಯಾ ಸಮಿತಿಯ ಸಂಚಾಲಕರಾದ ರಾಜಾರಾಂ ಹಾಗೂ ರಾಷ್ಟ್ರೋತ್ಥಾನದ ಆಡಳಿತ ಮಂಡಳಿ ಸದಸ್ಯ ರವಿಕುಮಾರ್ ಉಪಸ್ಥಿತರಿದ್ದರು.

- 2021ರ ಮಾರ್ಚ್ 8ರಂದು ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಮುಖ್ಯಶಿಕ್ಷಕರ ಬೈಠಕ್ ನಡೆಯಿತು. ರಾಷ್ಟ್ರೋತ್ಥಾನ ಶಾಲೆಗಳ ಮುಂದಿನ 5 ವರ್ಷಗಳವರೆಗಿನ ಗುರಿ ಮತ್ತು ಉದ್ದೇಶಗಳ ಚರ್ಚೆ, ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ, ರಾಷ್ಟ್ರೋತ್ಥಾನ ಸಾಹಿತ್ಯದ ಪರಿಚಯಕ್ಕೆ ಶಾಲೆಗಳಲ್ಲಿ ಗ್ರಂಥಾಲಯದ ಸ್ಥಾಪನೆ, ಆರೋಗ್ಯ ತಪಾಸಣಾ ಶಿಬಿರ, ಶಾಲೆಗಳಲ್ಲಿ ಯೋಗ ಕೇಂದ್ರಗಳ ಸ್ಥಾಪನೆ ಮುಂತಾದ ವಿಷಯಗಳ ಕುರಿತು ಚರ್ಚೆ ನಡೆಸಲಾಯಿತು.

**ಮುಖ್ಯ ಶಿಕ್ಷಕರ ಯೋಜನಾ ಬೈಠಕ್:** 2020–21ನೇ ಶೈಕ್ಷಣಿಕ ವರ್ಷದ ಯೋಜನಾ ಬೈಠಕ್ ಮಾರ್ಚ್ 1ರಂದು ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆಯಿತು. ರಾಜ್ಯ ಪಠ್ಯಕ್ರಮದ ಎಲ್ಲ ಮುಖ್ಯ ಶಿಕ್ಷಕರು ಭಾಗವಹಿಸಿದರು. ಕಳೆದ ವರ್ಷದ ಯೋಜನೆಯ ಕಾರ್ಯಾನ್ವಯದ ವರದಿ ಹಾಗೂ ಮುಂದಿನ ವರ್ಷದ ಚಟುವಟಿಕೆಗಳ ಕುರಿತು ಚರ್ಚೆ–ಸಂವಾದ ನಡೆಯಿತು.

**ಚಿಂತನಾ ಬೈಠಕ್:** ರಾಜ್ಯ ಪಾಠ್ಯಕ್ರಮ ಶಾಲೆಗಳ ಆಯ್ದ ಶಿಕ್ಷಕ–ಶಿಕ್ಷಕಿಯರ ಚಿಂತನಾ ಬೈಠಕ್ ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ ನವೆಂಬರ್ 21 ಮತ್ತು 22ರಂದು ನಡೆಯಿತು.

ವಿವಿಧ ಅವಧಿಗಳಲ್ಲಿ ನಡೆದ ಶಿಬಿರದಲ್ಲಿ ರಾಷ್ಟ್ರೋತ್ಥಾನ ವಿದ್ಯಾಲಯದ ಶಿಕ್ಷಕರಾದ ಆನಂದ (ಪ್ರಾರಂಭಿಕ ಶಾಲಾ ಶಿಕ್ಷಣ), ವೈಷ್ಣವಿ (ಸಾಕ್ಷರತೆ ಮತ್ತು ಗಣಿತ ಕೌಶಲ), ಲತಾ (ಶಿಕ್ಷಣದಲ್ಲಿ ಬಹುಭಾಷೆ), ಪದ್ಮಾವತಿ (ಉನ್ನತ ಶಿಕ್ಷಣದಲ್ಲಿ ಹೊಸ ಬಗೆಯ ಸಾಂಸ್ಥಿಕ ರಚನಾ ವಿನ್ಯಾಸ), ಪೂರ್ಣಿಮಾ (ಕಲಿಕೆಗೆ ಅನುಕೂಲಕರ ವಾತಾವರಣದ ಸೃಷ್ಟಿ), ವಿದ್ಯಾಶ್ರೀ (ಶಿಕ್ಷಕರ ಶಿಕ್ಷಣ), ಶ್ರೀನಿವಾಸ ಪಾಟೀಲ್ (ಉನ್ನತ ಶಿಕ್ಷಣದಲ್ಲಿ ನಿಯಂತ್ರಣ ವ್ಯವಸ್ಥೆಯ ಪರಿವರ್ತನೆ), ರಮೇಶ್ (ವೃತ್ತಿ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ), ಮಹೇಶ್ (ಭಾರತೀಯ ಕಲೆ, ಭಾಷೆ ಮತ್ತು ಸಂಸ್ಕೃತಿಯ ಪರಿಚಯ ಮತ್ತು ಶಿಕ್ಷಣದಲ್ಲಿ ತಂತ್ರಜ್ಞಾನ), ಶಶಿಕಲಾ (ಆನ್‌ಲೈನ್ ಮತ್ತು ಡಿಜಿಟಲ್ ಶಿಕ್ಷಣ ನೀತಿಯ ಯಶಸ್ವಿ ಅನುಷ್ಠಾನ), ರೇವತಿ (ಹೊಸ ಪಠ್ಯಕ್ರಮ ಮತ್ತು ಬೋಧನಾಕ್ರಮ), ಹಗರಿಬೊಮ್ಮನಹಳ್ಳಿ ವಿದ್ಯಾಲಯಗಳ ಕಾರ್ಯದರ್ಶಿ ಬಸವನಗೌಡ (ಉನ್ನತ ಶಿಕ್ಷಣ) ಮುಂತಾದವರು ಆಗಮಿಸಿ ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಅದರ ಅನುಷ್ಠಾನಕ್ಕೆ ಎದುರಾಗುವ ಸಮಸ್ಯೆ–ನಿವಾರಣೆಯ ಕುರಿತು ವಿಷಯಗಳನ್ನು ಮಂಡಿಸಿದರು.

**ಗಣಕಯಂತ್ರದ ಪ್ರಶಿಕ್ಷಣ ವರ್ಗ:** ರಾಷ್ಟ್ರೋತ್ಥಾನ ಪರಿಷತ್ ಶಾಲೆಗಳಲ್ಲಿ ಗಣಕಯಂತ್ರ ವಿಷಯವನ್ನು ಬೋಧಿಸುವ ಶಿಕ್ಷಕರಿಗೆ ಫೆಬ್ರುವರಿ 9ರಂದು ಆನ್‌ಲೈನ್ ಪ್ರಶಿಕ್ಷಣ ವರ್ಗವನ್ನು ಹಮ್ಮಿಕೊಳ್ಳಲಾಯಿತು. ಗಣಕಯಂತ್ರ ಚಟುವಟಿಕೆಗಳ ಕುರಿತು ಚರ್ಚಿಸಲಾಯಿತು.

**ಶಾಲಾ ಅವಲೋಕನ ಬೈಠಕ್:** 2021ರ ಜನವರಿ 10ರಂದು ಮುಂಗಾನಹಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ ಅರ್ಧವಾರ್ಷಿಕ ಅವಲೋಕನ ಬೈಠಕ್ ನಡೆಯಿತು. ಶಾಲೆಯಿಂದ ಈ ವರ್ಷ ಕನ್ನಡ ಮತ್ತು ಆಂಗ್ಲ ಮಾಧ್ಯಮದಿಂದ 6 ವಿದ್ಯಾಗಮ ಕಲಿಕಾ ಕೇಂದ್ರಗಳನ್ನು ಹಳ್ಳಿಗಳಲ್ಲಿ ಆರಂಭಿಸಲಾಗಿದೆ. ಸುಮಾರು 60 ಹಳ್ಳಿಗಳಿಗೆ ಭೇಟಿ ನೀಡಿ ಒಟ್ಟು 2,700 ಹಿರಿಯ ವಿದ್ಯಾರ್ಥಿಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ ಎಂದು ಮುಖ್ಯೋಪಾಧ್ಯಾಯರು ತಿಳಿಸಿದರು. ಶೈಕ್ಷಣಿಕ ಚಟುವಟಿಕೆಗಳು, 10ನೇ ತರಗತಿಯ ಪೂರ್ವಸಿದ್ಧತೆ ಪರೀಕ್ಷೆ – ಮೌಲ್ಯಮಾಪನ,

ಶಿಕ್ಷಕರ ಸಾಮರ್ಥ್ಯವೃದ್ಧಿ ಮುಂತಾದ ವಿಷಯಗಳ ಕುರಿತು ಚರ್ಚಿಸಲಾಯಿತು. ಶಿಕ್ಷಕರ ವೈಯಕ್ತಿಕ ದಾಖಲೆಗಳು, ಕಾರ್ಯಕ್ರಮಗಳು, ಶೈಕ್ಷಣಿಕ ಚಟುವಟಿಕೆಗಳು, ಮುಂದಿನ ವರ್ಷದಲ್ಲಿ ಆಯೋಜಿಸುವ ಚಟುವಟಿಕೆಗಳ ಯೋಜನೆಗಳನ್ನು ತಯಾರಿಸಲಾಗಿದ್ದು, ಅವುಗಳನ್ನು ಪ್ರಮುಖರು ಅವಲೋಕಿಸಿ ಸೂಕ್ತ ಮಾರ್ಗದರ್ಶನ ಮಾಡಿದರು.

## ಆ) ಪೋಷಕರಿಗಾಗಿ

ಶಾಲೆ ಹಾಗೂ ಶಾಲಾ ಸಂಬಂಧಿತರ ನಡುವೆ ಕೌಟುಂಬಿಕ ಮನೋಭಾವ ಮೂಡಿಸುವ ಸಲುವಾಗಿ ಹಾಗೂ ಮಕ್ಕಳ ವಿಕಾಸಕ್ಕೆ ಶಿಕ್ಷಕರು ಹಾಗೂ ಪೋಷಕರು ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಬೇಕು ಎಂಬ ಚಿಂತನೆಯಿಂದ ಪರಿಷತ್ ಕಾರ್ಯನಿರ್ವಹಿಸುತ್ತಿದೆ. ಇದಕ್ಕಾಗಿ ಪೋಷಕರೊಂದಿಗೆ ನಿರಂತರ ಸಂಪರ್ಕವಿಟ್ಟುಕೊಳ್ಳುವ ವಿವಿಧ ಚಟುವಟಿಕೆಗಳನ್ನು ರಾಷ್ಟ್ರೋತ್ಥಾನ ಪರಿಷತ್‌ನ ಶೈಕ್ಷಣಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ನಡೆಸಲಾಗುತ್ತಿದೆ.

**ಪೋಷಕರ ಸಭೆ:** ಶಾಲಾ ಚಟುವಟಿಕೆಗಳು ಹಾಗೂ ಮಕ್ಕಳ ವಿದ್ಯಾಭ್ಯಾಸದ ಗುಣಮಟ್ಟವನ್ನು ಪರಿಚಯಿಸುವ ಸಲುವಾಗಿ ನಿರ್ದಿಷ್ಟ ದಿನಗಳಿಗೊಮ್ಮೆ ಶಾಲಾ ಪೋಷಕರ ಸಭೆಯನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಕೊರೋನಾ ಕಾರಣದಿಂದ ಆನ್‌ಲೈನ್ ಮೂಲಕ ನಡೆಸಲಾಯಿತು.




## ಇ) ಹಳೆ ವಿದ್ಯಾರ್ಥಿಗಳಿಗಾಗಿ

**ಹಳೆ ವಿದ್ಯಾರ್ಥಿಗಳ ಕೂಟ (ರೂಟ್ಸ್):** ರಾಷ್ಟ್ರೋತ್ಥಾನದ ಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳು ಇಂದು ಸಮಾಜದ ಅನೇಕ ಪ್ರತಿಷ್ಠಿತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಹಲವು ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂತಹ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸುವ ಸಲುವಾಗಿ ಆಯಾ ಶಾಲೆಗಳಲ್ಲಿ ರೂಟ್ಸ್(Roots – ರಾಷ್ಟ್ರೋತ್ಥಾನ ಓಲ್ಡ್ ಸ್ಟೂಡೆಂಟ್ ಆರ್ಗನೈಸೇಷನ್ ಫಾರ್ ಟ್ರಾನ್ಸ್‌ಫಾರ್ಮಿಂಗ್ ಸೊಸೈಟಿ) ಸಮಾವೇಶಗಳನ್ನು ನಡೆಸಲಾಗುತ್ತಿದೆ. ತನ್ಮೂಲಕ ಹಳೆವಿದ್ಯಾರ್ಥಿಗಳನ್ನು ಶಾಲೆಯ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲಾಗುತ್ತಿದೆ.

ಕೊರೋನಾ ಕಾರಣದಿಂದ ಹಳೆ ವಿದ್ಯಾರ್ಥಿಗಳೊಂದಿಗೆ ನೇರ ಕಾರ್ಯಕ್ರಮ ನಡೆಸಲಾಗಲಿಲ್ಲ. ಆದರೆ ಶಾಲೆಯ ವಿವಿಧ ಚಟುವಟಿಕೆಗಳಲ್ಲಿ ಇವರನ್ನು ಜೋಡಿಸಿಕೊಳ್ಳಲಾಯಿತು.

## ಈ) ವಿದ್ಯಾರ್ಥಿಗಳಿಗಾಗಿ

ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕಳಕಳಿ ಹಾಗೂ ದೇಶ–ಧರ್ಮ–ಸಂಸ್ಕೃತಿಯ ಬಗೆಗೆ ಅಭಿಮಾನ, ಗೌರವ ಮೂಡಿಸುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್‌ನ ವಿದ್ಯಾಸಂಸ್ಥೆಗಳಲ್ಲಿ ವಿವಿಧ ದಿನಾಚರಣೆಗಳನ್ನು ಆಚರಿಸಲಾಗುತ್ತಿದೆ. ಈ ವರ್ಷ ನಡೆದ ಕಾರ್ಯಕ್ರಮಗಳು ಇಂತಿವೆ.

**ಅಕ್ಷರಾಭ್ಯಾಸ ಹಾಗೂ ವಿದ್ಯಾರಂಭ :** ನೂತನ ಶೈಕ್ಷಣಿಕ ವರ್ಷಾರಂಭದ ಸಂದರ್ಭದಲ್ಲಿ ಪರಿಷತ್‌ನ ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಸಲುವಾಗಿ ವಿದ್ಯಾರಂಭ ಕಾರ್ಯಕ್ರಮವನ್ನು ಹಾಗೂ ಹೊಸದಾಗಿ ಸೇರ್ಪಡೆಗೊಂಡ ಚಿಣ್ಣರಿಗೆ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕೊರೋನಾ ಕಾರಣದಿಂದ ಈ ವರ್ಷ ಆನ್‌ಲೈನ್ ಮೂಲಕ ವಿದ್ಯಾಭ್ಯಾಸ ಕಾರ್ಯಕ್ರಮ ನಡೆಯಿತು. ಪೂಜ್ಯ ಷ.ಬ್ರ. ಚರಂತೇಶ್ವರ ಶಿವಾಚಾರ್ಯ ಮಹಾ ಸ್ವಾಮಿಜೀ (ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ), ಹರಿಹರದ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಮಹಾಸ್ವಾಮಿಗಳು ಮುಂತಾದವರು ದಿವ್ಯ ಸಾನ್ನಿಧ್ಯ ವಹಿಸಿ ವಿದ್ಯಾಭ್ಯಾಸ ನೆರವೇರಿಸಿ ಆಶೀರ್ವಚನ ನೀಡಿದರು.

**ಅಂತಾರಾಷ್ಟ್ರೀಯ ಯೋಗ ದಿನಾಚರಣೆ:** ಜೂನ್ 21ರಂದು ಅನೇಕ ಶಾಲೆಗಳಲ್ಲಿ ಆನ್‌ಲೈನ್ ಮೂಲಕ ಅಂತಾರಾಷ್ಟ್ರೀಯ ಯೋಗದಿನವನ್ನು ಆಚರಿಸಲಾಯಿತು.

ಯೋಗದ ಕುರಿತು ಮಕ್ಕಳಲ್ಲಿ ಆಸಕ್ತಿ ಮೂಡಿಸುವ ಸಲುವಾಗಿ ಆನ್‌ಲೈನ್ ಮೂಲಕ ಯೋಗಾಸನ ಪ್ರದರ್ಶನ, ಯೋಗಾಸನ ಸ್ಪರ್ಧೆ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

**ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವ:** ದೇಶಕ್ಕೆ ಸ್ವಾತಂತ್ರ್ಯಪ್ರಾಪ್ತಿಯಾದ ಮಹತ್ವದ ಕ್ಷಣವಾದ ಸ್ವಾತಂತ್ರ್ಯ ದಿನಾಚರಣೆ ಹಾಗೂ ದೇಶದ ಪ್ರಜಾಪ್ರಭುತ್ವ–ಸಾರ್ವಭೌಮತೆಯ ಸಂಕೇತವಾದ ಗಣರಾಜ್ಯೋತ್ಸವ ಕಾರ್ಯಕ್ರಮಗಳನ್ನು ನಮ್ಮ ಶಾಲೆಗಳಲ್ಲಿ ಸಡಗರದಿಂದ ಆಚರಿಸಲಾಗುತ್ತಿದೆ. ವಿದ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟಗಾರರ ಶೌರ್ಯ ತ್ಯಾಗ ಬಲಿದಾನ ಪ್ರದರ್ಶಿಸುವ ನೃತ್ಯ ರೂಪಕಗಳನ್ನು ಪ್ರದರ್ಶಿಸಿದರು.

ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ನಿವೃತ್ತ ಸೇನಾಧಿಕಾರಿ ಮಧುಸೂದನ (ಚಿತ್ರದುರ್ಗ), ಕರ್ನಲ್ ಪಿ.ಎಲ್. ಜಯರಾಮ್ (ಕಲ್ಯಾಣನಗರ), ಮಹದೇವಪುರ ವಲಯ ಶೈಕ್ಷಣಿಕ ಸಂಯೋಜಕ ಸುಮನ್ (ರಾಮಮೂರ್ತಿನಗರ), ವಕೀಲರಾದ ಪ್ರಕಾಶ್ ಮತ್ತು ವಿ.ವಿ. ಪುರಂ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಶಿವರಾಮ್ (ಉಲ್ಲಾಳು ಉಪನಗರ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ನೆರವೇರಿಸಿದರು.




ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಚಿಂತಕ, ಲೇಖಕ, ಬಿಜೆಪಿಯ ಮಾಜಿ ಪ್ರಧಾನ ಕಾರ್ಯದರ್ಶಿ ರಾಮ್ ಮಾಧವ್ (ಬನಶಂಕರಿ), ಸೈನ್ಯದ ಇಂಜಿನಿಯರಿಂಗ್ ವಿಭಾಗದಲ್ಲಿ ಸುಬೇದಾರರಾಗಿದ್ದ ಬಿ.ಜಿ. ಉದ್ದೇಶ (ಧಾರವಾಡ), ಹೈಕೋರ್ಟ್‌ನ ಖ್ಯಾತ ವಕೀಲರಾದ ಶುಭಾ (ಉಲ್ಲಾಳು ಉಪನಗರ), ಕೆನರಾ ಬ್ಯಾಂಕ್‌ನ ನಿವೃತ್ತ ಉಪ ಜನರಲ್ ಮ್ಯಾನೇಜರ್ ನಾಗೇಶ್ ಅರ್ಲಿತಯ ಮತ್ತು ಬೆಂಗಳೂರಿನ ಜೆ.ಸಿ. ನಗರದ ಕೆನರಾ ಬ್ಯಾಂಕ್‌ನ ಹಿರಿಯ ವ್ಯವಸ್ಥಾಪಕ ಉದಯ್ ಶಾನ್‌ಭಾಗ್ (ಕಲ್ಯಾಣನಗರ), ಬ್ರಿಗೇಡಿಯರ್(ನಿ) ಪಿ.ಎಂ ಅಲುವಾರಿಯರ್ (ಥಣಿಸಂದ್ರ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

## ವಿವಿಧ ದಿನಾಚರಣೆಗಳು

ಮಕ್ಕಳಲ್ಲಿ ಸಾಮಾಜಿಕ ಕಳಕಳಿ ಹಾಗೂ ದೇಶ–ಧರ್ಮ–ಸಂಸ್ಕೃತಿಯ ಬಗೆಗೆ ಅಭಿಮಾನ, ಗೌರವ ಮೂಡಿಸುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್‌ನ ವಿದ್ಯಾಸಂಸ್ಥೆಗಳಲ್ಲಿ ವಿವಿಧ ದಿನಾಚರಣೆಗಳನ್ನು ಆಚರಿಸಲಾಗುತ್ತಿದೆ.

ಈ ವರ್ಷ ಆನ್‌ಲೈನ್ ಮೂಲಕ ಕನ್ನಡ ರಾಜ್ಯೋತ್ಸವ (ನವೆಂಬರ್ 1), ರಾಷ್ಟ್ರಭಾಷಾ ದಿನ, ವಿಶ್ವ, ರಾಷ್ಟ್ರೀಯ ಗ್ರಂಥಾಲಯ ದಿನಾಚರಣೆ (ಆಗಸ್ಟ್ 13), ಓಝೋನ್ ದಿನಾಚರಣೆ, ಕಾರ್ಗಿಲ್ ವಿಜಯೋತ್ಸವ ಮುಂತಾದ ದಿನಾಚರಣೆಗಳನ್ನು ಎಲ್ಲ ವಿದ್ಯಾಲಯ/ವಿದ್ಯಾಕೇಂದ್ರಗಳಲ್ಲಿ ಆಚರಿಸಲಾಯಿತು.

**ಮಹಾತ್ಮರ ಸ್ಮರಣೆ:** ಭವಿಷ್ಯದ ಕನಸು ಕಾಣಬೇಕಾದ ಮಕ್ಕಳಿಗೆ ಹೇಗೆ ಬದುಕಬೇಕು, ಯಾರಂತೆ ಬದುಕಬೇಕು ಎಂಬ ಬಗ್ಗೆ ಆದರ್ಶ ವ್ಯಕ್ತಿಗಳ ಅಗತ್ಯವಿದೆ. ಭಾರತದಲ್ಲಿ ಈ ರೋಲ್ ಮಾಡೆಲ್‌ಗಳಿಗೇನೂ ಕೊರತೆಯಿಲ್ಲ. ಪ್ರಾಚೀನ ಕಾಲದಿಂದ ಈವರೆಗೂ ಸಮಾಜಕ್ಕಾಗಿ ಸಮರ್ಪಿತ ಜೀವನ ನಡೆಸಿದ ಪರಂಪರೆಯೇ ನಮ್ಮಲ್ಲಿದೆ. ಆದರೆ ಈವರನ್ನು ನಮ್ಮ ಎಳೆಯ ಪೀಳಿಗೆಯ ಮುಂದೆ ತೆರೆದಿಡುವ ಕಾರ್ಯ ಅಷ್ಟಾಗಿ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ನಮ್ಮ ಮಹಾಪುರುಷರನ್ನು ಪರಿಚಯಿಸುವ ನಿರಂತರ ಪ್ರಯತ್ನ ನಡೆಸುತ್ತಿದೆ.

ಕೊರೋನಾ ಕಾರಣದಿಂದಾಗಿ ಶಾಲೆಗಳಲ್ಲಿ ಆನ್‌ಲೈನ್ ಮೂಲಕ ರಾಷ್ಟ್ರದ ನಾಡು–ನುಡಿ, ಸಂಸ್ಕೃತಿ, ಸ್ವಾಭಿಮಾನ, ಅಖಂಡತೆಗಾಗಿ ತಮ್ಮ ಜೀವನವನ್ನು ತೈಲದಂತೆ ಉರಿಸಿದ ನೂರಕ್ಕೂ ಅಧಿಕ ಭಾರತದ ಮಹಾನ್ ಚೇತನಗಳ ಜೀವನವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲಾಯಿತು.

# TAPAS ತಪಸ್ ಮತ್ತು ಸಾಧನಾ saadhana

reach the unreached

ಭಾರತೀಯ ಯುವಜನರ ಬುದ್ಧಿವಂತಿಕೆಯನ್ನು ಜಗತ್ತು ಕೌತುಕದಿಂದ ನೋಡುತ್ತಿದೆ. ಆದರೆ ಭಾರತದಲ್ಲಿನ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಆರ್ಥಿಕ ದುರ್ಬಲತೆಯಿಂದಲೋ ಸೂಕ್ತ ಮಾರ್ಗದರ್ಶನವಿಲ್ಲದೆಯೋ, ಆಯ್ಕೆಯ ಸಮಸ್ಯೆಯಿಂದಲೋ ಅವರ ಪ್ರತಿಭೆ ಹೊರಹೊಮ್ಮಲು ಅಸಾಧ್ಯವಾಗಿದೆ. ಈ ಸಮಸ್ಯೆಯನ್ನು ಗಮನದಲ್ಲಿರಿಸಿಕೊಂಡು ಗ್ರಾಮೀಣ ಪ್ರದೇಶದಲ್ಲಿನ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತ ಪಿ.ಯು. ಶಿಕ್ಷಣ ಹಾಗೂ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ತರಬೇತಿ ನೀಡುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್ 'ತಪಸ್' (ಬಾಲಕರಿಗಾಗಿ) ಹಾಗೂ ಸಾಧನಾ (ಬಾಲಕಿಯರಿಗಾಗಿ) ಎಂಬ ವಿಶಿಷ್ಟ ಯೋಜನೆಯನ್ನು ನಡೆಸುತ್ತಿದೆ.



## ತಪಸ್

ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬದ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ (ಗಂಡು ಮಕ್ಕಳಿಗೆ) ಉಚಿತ ವಸತಿ ಸಹಿತ ಪಿ.ಯು.ಸಿ. ಶಿಕ್ಷಣದ ಜೊತೆಗೆ ಐಐಟಿ–ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿಗೊಳಿಸುವುದೇ **'ತಪಸ್'** ಯೋಜನೆಯ ಉದ್ದೇಶ.

## ಸಾಧನಾ

ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬದ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ (ಹೆಣ್ಣು ಮಕ್ಕಳಿಗೆ) ಉಚಿತ ವಸತಿ ಸಹಿತ ಪಿ.ಯು.ಸಿ. ಶಿಕ್ಷಣದ ಜೊತೆಗೆ ಪ್ರತಿಷ್ಠಿತ NEET/CET ಪ್ರವೇಶ ಪರೀಕ್ಷೆಗೆ ತರಬೇತಿಗೊಳಿಸುವುದೇ **'ಸಾಧನಾ'** ಯೋಜನೆಯ ಉದ್ದೇಶ.

# TAPAS reach the unreached ತಪಸ್

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲ ಕುಟುಂಬದ ಪ್ರತಿಭಾವಂತ ಗಂಡುಮಕ್ಕಳನ್ನು ಪ್ರತಿಷ್ಠಿತ ಐಐಟಿ–ಜೆಇಇ ಶಿಕ್ಷಣ ಪಡೆಯುವಂತೆ ಮಾಡುವ ಸಲುವಾಗಿ 2012ರಲ್ಲಿ 'ತಪಸ್' ಯೋಜನೆ ಪ್ರಾರಂಭಗೊಂಡಿತು.

ಈ ಯೋಜನೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಸತಿ, ಭೋಜನ, ಕಾಲೇಜು ಶುಲ್ಕ, ಅಧ್ಯಯನ ಸಾಮಗ್ರಿ, ತರಬೇತಿ ಸೇರಿದಂತೆ 2 ವರ್ಷಗಳ ಶಿಕ್ಷಣ ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಇದಕ್ಕಾಗಿ ಬೆಂಗಳೂರಿನ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪರಿಸರದಲ್ಲಿ ಸುಸಜ್ಜಿತ ಪ್ರಯೋಗಾಲಯ, ಗ್ರಂಥಾಲಯ, ವಸತಿ ನಿಲಯಗಳಂತಹ ಮೂಲಭೂತ ಸೌಕರ್ಯಗಳನ್ನು ರೂಪಿಸಲಾಗಿದೆ.

ಪ್ರತಿಷ್ಠಿತ ಬೇಸ್ ಸಂಸ್ಥೆಯ ಸಹಯೋಗದಲ್ಲಿ ಈ ಚಟುವಟಿಕೆ ನಡೆಯುತ್ತಿದೆ. ಐಐಟಿ–ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗೆ ಮಕ್ಕಳನ್ನು ಸಿದ್ಧಪಡಿಸುವ ಹಿನ್ನೆಲೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ವಿಷಯಗಳ ಶ್ರೇಷ್ಠ ಮಟ್ಟದ ಸಾರಾಂಶವುಳ್ಳ ಪ್ರಶ್ನೋತ್ತರ ಸಹಿತ ಅಭ್ಯಾಸಪಾಠ್ಯಗಳನ್ನು ಸಿದ್ಧಪಡಿಸಿ, ಅವುಗಳನ್ನು ಪರಿಣಾಮಕಾರಿಯಾಗುವಂತೆ ಮಕ್ಕಳಿಗೆ ಮಾರ್ಗದರ್ಶನ ನೀಡುವ ಕಾರ್ಯವನ್ನು 'ಬೇಸ್' ಸಂಸ್ಥೆ ಮಾಡುತ್ತಿದೆ.

### ವಿದ್ಯಾರ್ಥಿಗಳ ಸಂಪರ್ಕ

- ರಾಜ್ಯದ ಎಲ್ಲ ಪ್ರೌಢಶಾಲೆಗಳಿಗೆ ವರ್ಷಕ್ಕೆರಡು ಬಾರಿ ತಪಸ್ ಪತ್ರಕಗಳನ್ನು ಕಳುಹಿಸಿ ಪರೀಕ್ಷೆಗೆ ಹೆಸರು ನೋಂದಾಯಿಸಿಕೊಳ್ಳುವಂತೆ ವಿನಂತಿಸಲಾಗುತ್ತದೆ
- ಪ್ರತೀ ವರ್ಷ ರಾಜ್ಯದ 100 ಕ್ಕಿಂತ ಹೆಚ್ಚು ಮೊರಾರ್ಜಿ, ಜೆ.ಎನ್.ವಿ. (ಜವಾಹರ್ ನವೋದಯ ವಿದ್ಯಾಲಯ), ಸರ್ಕಾರಿ ಇನ್ನಿತರ ಶಾಲೆಗಳನ್ನು ಖುದ್ದಾಗಿ ಸಂಪರ್ಕಿಸಿ ಪ್ರವೇಶ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಪ್ರೇರಣೆ ನೀಡಲಾಗುತ್ತದೆ.
- ವಿವಿಧ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಿಸಲಾಗುತ್ತದೆ.

### ಆಯ್ಕೆ ಪ್ರಕ್ರಿಯೆ

- 9ನೇ ತರಗತಿಯಲ್ಲಿ ಶೇ. 80ರಷ್ಟು ಅಂಕ ಗಳಿಸಿ, ಪ್ರಸ್ತುತ 10ನೇ ತರಗತಿ ಓದುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ. 2 ಲಕ್ಷ ಮೀರಿರದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.
- ಡಿಸೆಂಬರ್ 25ರಂದು ರಾಜ್ಯದ ಎಲ್ಲ ಜಿಲ್ಲೆಗಳೂ ಸೇರಿದಂತೆ 40 ಸ್ಥಾನಗಳಲ್ಲಿ ಏಕಕಾಲದಲ್ಲಿ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ.
- ಮೆರಿಟ್ ಆಧಾರದ ಮೇಲೆ 150 ವಿದ್ಯಾರ್ಥಿಗಳ ಆಯ್ಕೆ ಮಾಡಲಾಗುತ್ತದೆ.
- ಆಯ್ಕೆಯಾದ 150 ವಿದ್ಯಾರ್ಥಿಗಳ ಮನೆಗೆ ಪರಿಷತ್ತಿನ ಕಾರ್ಯಕರ್ತರು ಖುದ್ದು ಭೇಟಿ ನೀಡಿ, ಪ್ರತಿಯೊಬ್ಬ ವಿದ್ಯಾರ್ಥಿಗಳ ವಾಸ್ತವ ಸ್ಥಿತಿಗತಿಗಳ ಸಮೀಕ್ಷೆ ಮಾಡಲಾಗುತ್ತದೆ.
- 10ನೇ ತರಗತಿ ಪರೀಕ್ಷೆಯ ನಂತರ ಬೆಂಗಳೂರಿನಲ್ಲಿ 10 ದಿನಗಳ ವಸತಿ ಆಯ್ಕೆ ಶಿಬಿರ ನಡೆಸಲಾಗುತ್ತದೆ
- ಗ್ರಹಣ ಶಕ್ತಿ, ಆಸಕ್ತಿ, ಸಮಯದ ಸದುಪಯೋಗ, ನಡವಳಿಕೆ ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡು ಅಂತಿಮವಾಗಿ 40 ಮಕ್ಕಳ ಆಯ್ಕೆ ಮಾಡಲಾಗುತ್ತದೆ.

## ಫಲಾನುಭವಿಗಳು

| ವರ್ಷ | 1st PU | 2nd PU | ವರ್ಷ | 1st PU | 2nd PU |
|---|---|---|---|---|---|
| **2012–13** | 38 | 0 | **2017–18** | 37 | 34 |
| **2013–14** | 38 | 34 | **2018–19** | 46 | 37 |
| **2014–15** | 40 | 38 | **2019–20** | 32 | 46 |
| **2015–16** | 38 | 34 | **2020–21** | 41 | 32 |
| **2016–17** | 37 | 35 | | | |

## 2020–21ನೇ ಶೈಕ್ಷಣಿಕ ವರ್ಷ

- ಕೊರೋನಾ ಕಾರಣದಿಂದಾಗಿ ನಿರ್ದಿಷ್ಟ ಯೋಜನೆಯಂತೆ ಈವರ್ಷದ ಆಯ್ಕೆ ಪ್ರಕ್ರಿಯೆ ನಡೆಯಲಿಲ್ಲ. ಪೂರಕ ಮಾರ್ಗದ ಮೂಲಕ ಆಯ್ಕೆ ಮಾಡಿಕೊಳ್ಳಲಾಯಿತು.
- ಲಾಕ್‌ಡೌನ್‌ಗೆ ಮುನ್ನವೇ, ಅಂದರೆ 2019, ಡಿ. 25ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರವೇಶ ಪರೀಕ್ಷೆ ನಡೆಸಲಾಯಿತು. ರಾಜ್ಯದೆಲ್ಲೆಡೆಯ 3426 ಮಂದಿ ಪ್ರವೇಶ ಪರೀಕ್ಷೆ ಬರೆದಿದ್ದು, ಮುಂದಿನ ಹಂತಕ್ಕೆ ಆಯ್ಕೆಯಾದ 156 ವಿದ್ಯಾರ್ಥಿಗಳ ಮನೆ ಭೇಟಿ ಮಾಡಲಾಯಿತು.
- 10ನೇ ತರಗತಿ ಪರೀಕ್ಷೆ ಮುಗಿದ ಬಳಿಕ ಆಯ್ಕೆ ಶಿಬಿರ ಮಾಡಲು ಸಾಧ್ಯವಾಗಲಿಲ್ಲ. ಹೀಗಾಗಿ ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ವಿಜ್ಞಾನ ಮತ್ತು ಗಣಿತ ವಿಷಯದಲ್ಲಿ ಪಡೆದ ಗರಿಷ್ಠ ಅಂಕಗಳ ಆಧಾರದ ಮೇಲೆ ಅಂತಿಮ 41 ಮಕ್ಕಳನ್ನು ಆಯ್ಕೆ ಮಾಡಲಾಯಿತು.
- ಆಯ್ಕೆಯಾದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸಲಾಯಿತು.
- **ಪೋಷಕರ ಸಭೆ:** ಬೇಸ್‌ನಿಂದ ನೀಡುವ ಅಗತ್ಯ ಪಠ್ಯಪುಸ್ತಕ–ಪರಿಕರಗಳನ್ನು (ಮಾಡ್ಯುಲ್ಸ್) ಆಯಾಕಾಲಕ್ಕೆ ತಲುಪಿಸಲು ಮತ್ತು ಆನ್‌ಲೈನ್ ತರಗತಿಗಳ ಸಮಸ್ಯೆಗಳ ಪರಿಹಾರಕ್ಕಾಗಿ, ಕಲಿಕೆಯ ಗುಣಮಟ್ಟ ಮುಂತಾದ ವಿಷಯಗಳ ಕುರಿತು ಚರ್ಚೆ ನಡೆಸಲು ಹಾಗೂ ವಿದ್ಯಾರ್ಥಿಗಳ ಅವಲೋಕನಕ್ಕಾಗಿ ಕರ್ನಾಟಕದಾದ್ಯಂತ 8 ಕೇಂದ್ರಗಳಲ್ಲಿ (ಹಗರಿಬೊಮ್ಮನಹಳ್ಳಿ, ದಾವಣಗೆರೆ, ಹುಬ್ಬಳ್ಳಿ, ತೀರ್ಥಹಳ್ಳಿ, ಹುನಗುಂದ, ಬೆಂಗಳೂರು, ಚಿತ್ರದುರ್ಗ, ಹಾರೂಗೇರಿ) ಪಠ್ಯಪರಿಕರಗಳನ್ನು ವಿತರಿಸಿ ಪೋಷಕರ ಸಭೆ ನಡೆಸಲಾಯಿತು.
- ಆನ್‌ಲೈನ್ ತರಗತಿಗಳ ಸಾಧಕಬಾಧಕಗಳ ಬಗೆಗೆ ಚರ್ಚೆ–ಮಾರ್ಗದರ್ಶನ ಮಾಡಲಾಯಿತು. ಸಮಸ್ಯೆಗಳನ್ನು ಪರಿಹರಿಸಲಾಯಿತು.

## ವಿದ್ಯಾರ್ಥಿಗಳ ಮಾನಸಿಕ, ಶಾರೀರಿಕ, ಬೌದ್ಧಿಕ, ಭಾವನಾತ್ಮಕ ಮತ್ತು ಸಾಂಸ್ಕೃತಿಕ ವಿಕಾಸಕ್ಕಾಗಿ ನಡೆದ ಚಟುವಟಿಕೆಗಳು

- **ವಿದ್ಯಾರಂಭ:** ಕರೋನಾ ಕಡಿಮೆಯಾದ ಹಿನ್ನೆಲೆಯಲ್ಲಿ ಡಿಸೆಂಬರ್‌ನಲ್ಲಿ ಕೊರೊನಾ ಪರೀಕ್ಷೆಯ ನಂತರ ತಪಸ್ ವಿದ್ಯಾರ್ಥಿಗಳ ಹಾಸ್ಟೆಲ್‌ಗೆ ಪ್ರವೇಶಕ್ಕೆ ಅವಕಾಶ ನೀಡಲಾಯಿತು. ಈ ವಿದ್ಯಾರ್ಥಿಗಳಿಗೆ 2021ರ ಜನವರಿ 8ರಂದು ವಿದ್ಯಾರಂಭ ಕಾರ್ಯಕ್ರಮ ನಡೆಸಲಾಯಿತು. ರಾಷ್ಟ್ರೋತ್ಥಾನದ ಆಡಳಿತ ಮಂಡಳಿ ಸದಸ್ಯರಾದ ರವಿಕುಮಾರ್, ಬನಶಂಕರಿ ವಿದ್ಯಾಕೇಂದ್ರದ ಪ್ರಾಂಶುಪಾಲರಾದ ವಸಂತ್‌ಕುಮಾರ್ ಉಪಸ್ಥಿತರಿದ್ದರು.
- **ಹಬ್ಬಗಳ ಆಚರಣೆ:** ವಿದ್ಯಾರ್ಥಿಗಳಲ್ಲಿ ಗುಣನಿರ್ಮಾಣ ಹಾಗೂ ಮಾನಸಿಕ ವಿಕಾಸಕ್ಕಾಗಿ ವಿವಿಧ ಹಬ್ಬಗಳನ್ನು ಆಚರಿಸಲಾಯಿತು. ಮಕರ ಸಂಕ್ರಾಂತಿ, ಗಣರಾಜ್ಯೋತ್ಸವ ಮುಂತಾದ ಹಬ್ಬಗಳನ್ನು ಆಚರಿಸಲಾಗುತ್ತಿದೆ.





- **ಸಂಕಲ್ಪ:** ತಮ್ಮ ಎರಡು ವರ್ಷಗಳ ಕಠಿಣ ಪರಿಶ್ರಮದಿಂದ ಶಿಕ್ಷಣ ಮುಗಿಸಿ ಮುಂದಿನ ಉನ್ನತ ಶಿಕ್ಷಣಕ್ಕೆ ಹೋಗುವ ದ್ವಿತೀಯ ಪಿ.ಯು. ವಿದ್ಯಾರ್ಥಿಗಳಿಗಾಗಿ ಪ್ರತೀ ವರ್ಷ ಸಂಕಲ್ಪ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಈ ವರ್ಷ ಸೆ. 30ರಂದು ನಡೆದ ಸಂಕಲ್ಪ ಕಾರ್ಯಕ್ರಮದಲ್ಲಿ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ, ಬೇಸ್‌ನ ಸಿ.ಇ.ಓ ಅನಂತ ಕುಲಕರ್ಣಿ ಹಾಗೂ ಪರಿಷತ್‌ನ ಸಿ.ಬಿ.ಎಸ್.ಇ. ಶಾಲೆಗಳ ಸಹಸಂಚಾಲಕರಾದ ಗಜಾನನ ಲೋಂಡೆ ಅವರು ಉಪಸ್ಥಿತರಿದ್ದು, ಮುಂದಿನ ಉನ್ನತ ವ್ಯಾಸಂಗಕ್ಕೆ ಶುಭಕೋರಿದರು.

- **ವ್ಯಕ್ತಿತ್ವ ವಿಕಸನ ಶಿಬಿರ:** ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕಾಗಿ ಶಿರಸಿ ಸಮೀಪದ ಚಾರೆ ಗ್ರಾಮದ ಶ್ರೀಧರ ಹೆಗಡೆ ಅವರ ಮನೆಯಲ್ಲಿ 2021ರ ಮಾರ್ಚ್ 18ರಿಂದ 21ರ ವರೆಗೆ ವ್ಯಕ್ತಿತ್ವ ವಿಕಸನ ಶಿಬಿರವನ್ನು ಆಯೋಜಿಸಿಲಾಯಿತು.

  ಒಟ್ಟು 4 ದಿನಗಳ ಶಿಬಿರದಲ್ಲಿ ಪಾಠ್ಯವನ್ನು ಹೊರತುಪಡಿಸಿ, ಅವರ ವೈಯಕ್ತಿಕ ಬೆಳವಣಿಗೆಗೆ ಅಗತ್ಯವಾದ ಸಂಸ್ಕಾರಗಳು, ಸಂಸ್ಕೃತಿ–ಪರಂಪರೆ, ದೇಶದ ನೈಜ ಇತಿಹಾಸ, ಜೀವನ ಶೈಲಿ, ಸರಳ ಜೀವನ, ನಡವಳಿಕೆ, ಸಮಾಜದಲ್ಲಿ ನಮ್ಮ ಪಾತ್ರ, ದೇಶ–ಸಮಾಜಕ್ಕಾಗಿ ನಾನೇನು ಮಾಡಬೇಕು ಮುಂತಾದ ವಿಷಯಗಳ ಕುರಿತು ಮಾರ್ಗದರ್ಶನ ಮಾಡಲಾಯಿತು. ಶಿಬಿರದಲ್ಲಿ ರಾಷ್ಟ್ರೋತ್ಥಾನದ ಪ್ರಧಾನ ಕಾರ್ಯದಶಿ ನಾ. ದಿನೇಶ್ ಹೆಗ್ಡೆ, ಖಜಾಂಚಿ ಗಣಪತಿ ಹೆಗ್ಡೆ, ಸದಸ್ಯರಾದ ರವಿಕುಮಾರ್, ರಾಜ್ಯಪಾಠ್ಯಕ್ರಮ ಕ್ರಿಯಾ ಸಮಿತಿಯ ಶ್ರೀಧರಮೂರ್ತಿ ಮುಂತಾದವರು ಉಪಸ್ಥಿತರಿದ್ದು ಮಕ್ಕಳಿಗೆ ಮೌಲ್ಯಯುತ ವಿಚಾರಗಳನ್ನು ತಿಳಿಸಿದರು.

  ಸುತ್ತಮುತ್ತಲಿನ ಪರಿಸರ ಪರಿಚಯ, ಒಂದಂಕಿ ಮರ, ಉಂಚಳ್ಳಿ ಫಾಲ್ಸ್, ಯಾಣ, ಮಂಜುಗುಣಿ ವೆಂಕಟೇಶ ದೇವಸ್ಥಾನ ಮುಂತಾದ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಲಾಯಿತು.

- **14 ಮಂದಿಗೆ ಐಐಟಿ ಪ್ರವೇಶಕ್ಕೆ ಅರ್ಹತೆ:** ಈ ವರ್ಷ ದ್ವಿತೀಯ ಪಿ.ಯು. ಪರೀಕ್ಷೆ ಬರೆದ 45 ವಿದ್ಯಾರ್ಥಿಗಳಲ್ಲಿ 42 ಮಂದಿ ಜೆಇಇ ಮೇನ್ಸ್ ಪರೀಕ್ಷೆ ಬರೆದಿದ್ದು 14 ವಿದ್ಯಾರ್ಥಿಗಳು ಐಐಟಿ ಪ್ರವೇಶ ಪಡೆಯಲು ಅರ್ಹತೆ ಪಡೆದಿದ್ದರು. ಸಿ.ಇ.ಟಿ.ಯಲ್ಲಿಯೂ ಉತ್ತಮ ರ‍್ಯಾಂಕ್ ಗಳಿಸಿದ್ದರು. ಒಟ್ಟು 45 ವಿದ್ಯಾರ್ಥಿಗಳಲ್ಲಿ 3 ಮಂದಿ ಐಐಟಿಯಲ್ಲಿ (2 ಗೌಹಾತಿ, 1 ಮುಂಬೈ) ಹಾಗೂ 19 ಮಂದಿ ಎನ್.ಐ.ಟಿ. ಸುರತ್ಕಲ್ ಕಾಲೇಜಿನಲ್ಲಿ ಪ್ರವೇಶ ಪಡೆದರು. ಉಳಿದವರು ಆರ್.ವಿ., ಪಿ.ಇ.ಎಸ್., ಬಿ.ಎಂ.ಎಸ್. ಮುಂತಾದ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದಾರೆ.

## ಪಕ್ಷಿನೋಟ

- ಈಗಾಗಲೇ 7 ತಂಡಗಳ 300ಕ್ಕೂ ಅಧಿಕ ಬಡ ವಿದ್ಯಾರ್ಥಿಗಳು ತಮ್ಮ ಎರಡು ವರ್ಷಗಳ ಶಿಕ್ಷಣ ಪಡೆದು ಉನ್ನತ ಶಿಕ್ಷಣಕ್ಕಾಗಿ ಹೊರಬಂದಿದ್ದಾರೆ. ಮೊದಲನೇ ತಂಡದವರು ಈ ವರ್ಷ ತಮ್ಮ ವೃತ್ತಿ ಜೀವನಕ್ಕೆ ಕಾಲಿಟ್ಟಿದ್ದಾರೆ. ಎಲ್ಲರೂ ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಪಡೆದಿದ್ದಾರೆ.

- ಇದುವರೆಗೂ 23 ವಿದ್ಯಾರ್ಥಿಗಳು ದೇಶದ 7 ವಿವಿಧ ಐಐಟಿಗಳಲ್ಲಿ ಪ್ರವೇಶ ಪಡೆದಿದ್ದಾರೆ. 50ಕ್ಕೂ ಅಧಿಕ ಮಂದಿ ಎನ್.ಐ.ಟಿ ಪ್ರವೇಶ ಪಡೆದಿದ್ದಾರೆ. ಉಳಿದವರು ಬೆಂಗಳೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳಾದ ಆರ್.ವಿ., ಪಿ.ಇ.ಎಸ್., ಬಿ.ಎಂ.ಎಸ್. ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದಾರೆ.

## ಪರಿಣಾಮ

- ತಪಸ್ ಒಬ್ಬ ವಿದ್ಯಾರ್ಥಿಯ ಜೀವನವನ್ನಷ್ಟೇ ಅಲ್ಲದೆ ಅವರ ಇಡೀ ಪರಿವಾರದವರನ್ನೂ ಬದಲಾಯಿಸಿದೆ. ಆರ್ಥಿಕಮಟ್ಟದ ಜೊತೆಗೆ ಸಮಾಜದಲ್ಲಿ ಅವರ ಗುರುತಿಸುವಿಕೆ ಬದಲಾಗಿದೆ.

- ಹೈಸ್ಕೂಲ್, ಕಾಲೇಜು ವಿದ್ಯಾರ್ಥಿಗಳು ತಮ್ಮ ಮುಂದಿನ ಶೈಕ್ಷಣಿಕ ಆಯ್ಕೆಯ ಬಗೆಗೆ ತಪಸ್ ವಿದ್ಯಾರ್ಥಿಗಳ ಮಾರ್ಗದರ್ಶನ ಪಡೆಯುತ್ತಿದ್ದಾರೆ.

ಬಹಳಷ್ಟು ಹೆತ್ತವರು ಹೆಣ್ಣುಮಕ್ಕಳನ್ನು ಕಾಲೇಜು ಶಿಕ್ಷಣಕ್ಕಾಗಿ ದೂರದ ಪ್ರದೇಶಕ್ಕೆ ಕಳುಹಿಸುವ ಶಕ್ತಿ ಹೊಂದಿರುವುದಿಲ್ಲ. ಹಾಗಾಗಿ, ಸಮೀಪದ ಯಾವುದೋ ಸರ್ಕಾರಿ ಕಾಲೇಜಿಗೆ ಕೆಲವರು ಸೇರಿಸಿದರೆ ಮತ್ತೆ ಕೆಲವರು ಮದುವೆ ಮಾಡಿ 'ಜವಾಬ್ದಾರಿ ಮುಗಿಯಿತು' ಎಂದು ಕೈ ತೊಳೆದುಕೊಳ್ಳುತ್ತಾರೆ. ಆದರೆ, ಗ್ರಾಮೀಣ ಭಾಗದ ಪ್ರತಿಭಾವಂತ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒಂದಿಷ್ಟು ಅನುಕೂಲ ಕಲ್ಪಿಸಿದರೆ ಅವರು ಯಾರಿಗೂ ಕಡಮೆ ಇಲ್ಲದಂತೆ ಸಾಧನೆಯ ಹೆಗ್ಗುರುತುಗಳನ್ನು ಮೂಡಿಸಬಲ್ಲರು. ಈ ನಿಟ್ಟಿನಲ್ಲಿ ವ್ಯಾಪಕ ಚಿಂತನ–ಮಂಥನ ನಡೆಸಿ ಹೆಣ್ಣುಮಕ್ಕಳಿಗಾಗಿಯೇ 2017–18ರ ಶೈಕ್ಷಣಿಕ ವರ್ಷದಿಂದ 'ಸಾಧನಾ' ಎಂಬ ಯೋಜನೆಯನ್ನು ಆರಂಭಿಸಲು ನಿರ್ಧರಿಸಲಾಗಿದೆ.

ಬಾಲಕರಿಗಾಗಿ ಇರುವ ತಪಸ್‌ನಂತೆಯೇ ನಡೆಯುವ ಈ ಯೋಜನೆಯಲ್ಲಿ ಆಯ್ಕೆಯಾದ ಬಡ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಬೆಂಗಳೂರಿನ ಥಣಿಸಂದ್ರದಲ್ಲಿರುವ ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನಲ್ಲಿ ಎರಡು ವರ್ಷಗಳ ಪಿಯುಸಿ ಶಿಕ್ಷಣವನ್ನು ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಅಲ್ಲದೆ, ಆಯ್ಕೆಯಾದ ವಿದ್ಯಾರ್ಥಿನಿಯರಿಗೆ ಎನ್‌ಇಟಿ (National Eligibility and Entrance) ಹಾಗೂ ಸಿಇಟಿ ಪ್ರವೇಶ ಪರೀಕ್ಷೆಗಳಿಗಾಗಿ ತರಬೇತಿ ನೀಡಲಾಗುತ್ತದೆ. ಊಟ, ಹಾಸ್ಟೆಲ್ ಸೌಲಭ್ಯ ಹಾಗೂ ಅಧ್ಯಯನ ಸಾಮಗ್ರಿಯನ್ನು ಉಚಿತವಾಗಿ ಪೂರೈಸಲಾಗುತ್ತದೆ.

## 2020–21ನೇ ಶೈಕ್ಷಣಿಕ ವರ್ಷ

- ಕೊರೋನಾ ಕಾರಣದಿಂದಾಗಿ ನಿರ್ದಿಷ್ಟ ವ್ಯವಸ್ಥಾತ್ಮಕವಾಗಿ ಈ ವರ್ಷದ ಆಯ್ಕೆ ಪ್ರಕ್ರಿಯೆ ನಡೆಯಲಿಲ್ಲ. ಪೂರಕ ಮಾರ್ಗದ ಮೂಲಕ ಆಯ್ಕೆ ಮಾಡಿಕೊಳ್ಳಲಾಯಿತು.
- ಲಾಕ್‌ಡೌನ್‌ಗೆ ಮುನ್ನವೇ, ಅಂದರೆ 2019, ಡಿ. 25ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರವೇಶ ಪರೀಕ್ಷೆ ನಡೆಸಲಾಯಿತು. ರಾಜ್ಯದೆಲ್ಲೆಡೆಯ 4200ಕ್ಕೂ ಅಧಿಕ ವಿದ್ಯಾರ್ಥಿನಿಯರು ಪ್ರವೇಶ ಪರೀಕ್ಷೆ ಬರೆದಿದ್ದು, ಮುಂದಿನ ಹಂತಕ್ಕೆ ಆಯ್ಕೆಯಾದ 252 ವಿದ್ಯಾರ್ಥಿಗಳ ಮನೆ ಭೇಟಿ ಮಾಡಲಾಯಿತು.
- 10ನೇ ತರಗತಿ ಪರೀಕ್ಷೆ ಮುಗಿದ ಬಳಿಕ ಆಯ್ಕೆ ಶಿಬಿರ ಮಾಡಲು ಸಾಧ್ಯವಾಗಲಿಲ್ಲ. ಹೀಗಾಗಿ ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ವಿಜ್ಞಾನ ಮತ್ತು ಗಣಿತ ವಿಷಯದಲ್ಲಿ ಪಡೆದ ಗರಿಷ್ಠ ಅಂಕಗಳ ಆಧಾರದ ಮೇಲೆ ಅಂತಿಮ 75 ವಿದ್ಯಾರ್ಥಿನಿಯರನ್ನು ಸಾಧನಾದ 2020–21ರ ಸಾಧನಾ ಯೋಜನೆಗೆ ಆಯ್ಕೆ ಮಾಡಲಾಯಿತು.
- ಆಯ್ಕೆಯಾದ ಪ್ರಥಮ ಹಾಗೂ ಈ ಹಿಂದೆ ಆಯ್ಕೆಯಾದ ದ್ವಿತೀಯ ವರ್ಷದ ವಿದ್ಯಾರ್ಥಿಗಳನ್ನು ಪ್ರತ್ಯೇಕವಾಗಿ ತಂಡಗಳಾಗಿ ವಿಂಗಡಿಸಿ ಆನ್‌ಲೈನ್ ತರಗತಿಗಳನ್ನು ನಡೆಸಲಾಯಿತು. ಬೇಸ್‌ನ ತಜ್ಞ ಅಧ್ಯಾಪಕರು ತರಗತಿಗಳನ್ನು ತೆಗೆದುಕೊಂಡರು.
- **ಪಠ್ಯವಿತರಣೆ ಮತ್ತು ಪೋಷಕರ ಸಭೆ:** ಬೇಸ್‌ನಿಂದ ನೀಡುವ ಅಗತ್ಯ ಪಠ್ಯಪುಸ್ತಕ–ಪರಿಕರಗಳನ್ನು (ಮಾಡ್ಯುಲ್) ಆಯಾಕಾಲಕ್ಕೆ ತಲುಪಿಸಲು ಮತ್ತು ಆನ್‌ಲೈನ್ ತರಗತಿಗಳ ಸಮಸ್ಯೆಗಳ ಪರಿಹಾರಕ್ಕಾಗಿ, ಕಲಿಕೆಯ ಗುಣಮಟ್ಟ ಮುಂತಾದ ವಿಷಯಗಳ ಕುರಿತು ಚರ್ಚೆ ನಡೆಸಲು ಹಾಗೂ ವಿದ್ಯಾರ್ಥಿಗಳ ಅವಲೋಕನಕ್ಕಾಗಿ ಕರ್ನಾಟಕದಾದ್ಯಂತ 8 ಕೇಂದ್ರಗಳನ್ನು (ಹಗರಿಬೊಮ್ಮನಹಳ್ಳಿ, ದಾವಣಗೆರೆ, ಚಿತ್ರದುರ್ಗ, ಹುಬ್ಬಳ್ಳಿ, ಬೆಂಗಳೂರು ಇತ್ಯಾದಿ) ಗುರುತಿಸಲಾಯಿತು.

  ಸಮೀಪದ ಕೇಂದ್ರಗಳಿಗೆ ಆಮಂತ್ರಿಸಿ ವಿದ್ಯಾರ್ಥಿಗಳು ಮತ್ತು ಪೋಷಕರೊಂದಿಗೆ ಸಭೆ ನಡೆಸಲಾಯಿತು. ಆನ್‌ಲೈನ್ ತರಗತಿಗಳ ಸಾಧಕಬಾಧಕಗಳ ಬಗೆಗೆ ಚರ್ಚೆ–ಮಾರ್ಗದರ್ಶನ ಮಾಡಲಾಯಿತು. ಸಮಸ್ಯೆಗಳನ್ನು ಪರಿಹರಿಸಲಾಯಿತು.

## ವಿದ್ಯಾರ್ಥಿನಿಯರ ವಿಕಾಸಕ್ಕಾಗಿ ನಡೆಸಿದ ಚಟುವಟಿಕೆಗಳು

**ಸಂಕಲ್ಪ:** ತಮ್ಮ ಎರಡು ವರ್ಷಗಳ ಕಠಿಣ ಪರಿಶ್ರಮದಿಂದ ಶಿಕ್ಷಣ ಮುಗಿಸಿ ಮುಂದಿನ ಉನ್ನತ ಶಿಕ್ಷಣಕ್ಕೆ ಹೋಗುವ ದ್ವಿತೀಯ ಪಿ.ಯು. ವಿದ್ಯಾರ್ಥಿಗಳಿಗಾಗಿ ಸೆಪ್ಟೆಂಬರ್ 29ರಂದು ಸಂಕಲ್ಪ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ರಾಷ್ಟ್ರೋತ್ಥಾನದ ಉಪಾಧ್ಯಕ್ಷರಾದ ದ್ವಾರಕನಾಥ್ ಅವರು ಅಧ್ಯಕ್ಷತೆ ವಹಿಸಿದರು. ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಬೇಸ್ ಸಂಸ್ಥೆಯ ಸಿಇಓ ಅನಂತ ಕುಲಕರ್ಣಿ ಅವರು ಮಾರ್ಗದರ್ಶನ ಮಾಡಿದರು. ಸಮಾರಂಭದಲ್ಲಿ ವಿದ್ಯಾರ್ಥಿನಿಯರ ಪೋಷಕರು ಹಾಗೂ ಕಾಲೇಜಿನ ಪ್ರಾಂಶುಪಾಲೆ ಚಂದ್ರಕಲಾ ಅವರು ಉಪಸ್ಥಿತರಿದ್ದರು.



**ಉತ್ಸವ–ಹಬ್ಬಗಳ ಆಚರಣೆ:** ವಿದ್ಯಾರ್ಥಿಗಳಲ್ಲಿ ಗುಣನಿರ್ಮಾಣ ಹಾಗೂ ಮಾನಸಿಕ ವಿಕಾಸಕ್ಕಾಗಿ ವಿವಿಧ ಹಬ್ಬಗಳನ್ನು ಆಚರಿಸಲಾಯಿತು. ಮಕರ ಸಂಕ್ರಾಂತಿ, ಗಾಯತ್ರಿ ಹೋಮ, ಗಣರಾಜ್ಯೋತ್ಸವ ಮುಂತಾದ ಹಬ್ಬಗಳನ್ನು ಆಚರಿಸಲಾಗುತ್ತಿದೆ.

**ವ್ಯಕ್ತಿತ್ವ ವಿಕಸನ ಶಿಬಿರ:** ವಿದ್ಯಾರ್ಥಿನಿಯ ವ್ಯಕ್ತಿತ್ವ ವಿಕಾಸಕ್ಕಾಗಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಕುಪ್ಪಳಿಯಲ್ಲಿ ಫೆಬ್ರುವರಿ 26ರಿಂದ 28ರ ತನಕ ವ್ಯಕ್ತಿತ್ವ ವಿಕಸನ ಶಿಬಿರವನ್ನು ಆಯೋಜಿಸಿಲಾಯಿತು. ಮೂರು ದಿನಗಳ ಈ ಶಿಬಿರದಲ್ಲಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷರಾದ ಕಡಿದಾಳ್ ಪ್ರಕಾಶ್ ಅವರು ವಿದ್ಯಾರ್ಥಿನಿಯರ ವೈಯಕ್ತಿಕ ಬೆಳವಣಿಗೆ, ಉತ್ತಮ ಸಂಸ್ಕಾರ, ಪರಂಪರೆ, ನಮ್ಮ ನೈಜ ಇತಿಹಾಸ, ಜೀವನಶೈಲಿ, ಸಮಾಜದಲ್ಲಿ ನಮ್ಮ ಪಾತ್ರ ಮುಂತಾದವುಗಳ ಕುರಿತು ತಿಳಿಸಿಕೊಟ್ಟರು. ರಾಷ್ಟ್ರೋತ್ಥಾನ ಪರಿಷತ್ತಿನ ರವಿಕುಮಾರ್, ರಾಜಾರಾಮ್, ರುಕ್ಮಿಣಿ, ರೇವತಿ, ಶ್ರೀಧರಮೂರ್ತಿ ಮುಂತಾದವರು ಮೌಲ್ಯಯುತವಾದ ವಿಚಾರಗಳನ್ನು ತಿಳಿಸಿದರು. ಮಾರ್ಚ್ 6ರಂದು ದೊಡ್ಡಬಳ್ಳಾಪುರದ ಘಾಟಿ ಸುಬ್ರಹ್ಮಣ್ಯದಲ್ಲಿರುವ ಗೋ ಶಾಲೆಗೆ ಭೇಟಿ ನೀಡಿದರು.

**ಹತ್ತು ವಿದ್ಯಾರ್ಥಿನಿಯರು ಮೆಡಿಕಲ್‌ಗೆ:** 2020–21ನೇ ಸಾಲಿನಲ್ಲಿ 10 ವಿದ್ಯಾರ್ಥಿನಿಯರು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದರು ಹಾಗೂ ಮೂವರು ವಿದ್ಯಾರ್ಥಿನಿಯರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಆಯ್ಕೆಯಾದರು. ಉಳಿದ ವಿದ್ಯಾರ್ಥಿನಿಯರು ತಾಂತ್ರಿಕ ಶಿಕ್ಷಣಕ್ಕೆ, ಪದವಿ ಶಿಕ್ಷಣ, ಫಾರ್ಮಸಿ, ಬಯೋ ಇಂಫಾರ್ಮೇಷನ್‌ಗೆ ಪ್ರವೇಶ ಪಡೆದಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 36 ವಿದ್ಯಾರ್ಥಿನಿಯರು ಅತ್ಯುತ್ತಮ ಶ್ರೇಣಿ, 15 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು.

# ರಾಷ್ಟ್ರೋತ್ಥಾನ ಪರಿಷತ್

## ಲಕ್ಷ್ಯ

ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ

## ಧ್ಯೇಯ

- ಭಾರತೀಯ ಜೀವನಮೌಲ್ಯಗಳನ್ನು ಜನಮನದಲ್ಲಿ ಬೇರೂರಿಸುವ ಸಾಹಿತ್ಯ ನಿರ್ಮಾಣ ಮತ್ತು ಪ್ರಸಾರ.
- ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾದ ಸಂಸ್ಕಾರಯುಕ್ತ, ರಾಷ್ಟ್ರನಿಷ್ಠ ಶಿಕ್ಷಣದ ಮೂಲಕ ಸಾಮಾಜಿಕ ಪರಿವರ್ತನೆ.
- ಸಮಾಜದ ಅಗತ್ಯಗಳ ಪೂರೈಕೆಗಾಗಿ ಯೋಗ, ಆರೋಗ್ಯ ಮತ್ತು ವಿವಿಧ ಸೇವಾ ಚಟುವಟಿಕೆಗಳು.
- ಈ ಎಲ್ಲ ಚಟುವಟಿಕೆಗಳಲ್ಲೂ ಉತ್ಕೃಷ್ಟ ಕಾರ್ಯಮಾದರಿಗಳ ಸೃಷ್ಟಿ ಮತ್ತು ಅವುಗಳ ವ್ಯಾಪಕ ಅಳವಡಿಕೆಗೆ ಪ್ರೋತ್ಸಾಹ.

## ಮೌಲ್ಯಗಳು

- ಆತ್ಮೀಯತೆ
- ಬದ್ಧತೆ
- ರಾಷ್ಟ್ರಭಕ್ತಿ
- ಸಮಗ್ರತೆ (Integrity)

## ರಾಷ್ಟ್ರೋತ್ಥಾನ ಪರಿಷತ್

ಕೇಶವಶಿಲ್ಪ, ಕೆಂಪೇಗೌಡನಗರ
ಬೆಂಗಳೂರು - 560 004
E-mail: rp@rashtrotthana.org
Website: www.rashtrotthana.org

## ಆಡಳಿತ ಮಂಡಳಿ

ಅಧ್ಯಕ್ಷರು
**ಶ್ರೀ ಎಂ.ಪಿ. ಕುಮಾರ್**
ಖ್ಯಾತ ಉದ್ಯಮಿಗಳು ಹಾಗೂ ಸಾಮಾಜಿಕ ಕಾರ್ಯಕರ್ತರು

ಉಪಾಧ್ಯಕ್ಷರು
**ಶ್ರೀ ಎ.ಆರ್. ದ್ವಾರಕಾನಾಥ್**
ವ್ಯವಸ್ಥಾಪಕರು (ನಿ) ಬಿ.ಎಚ್.ಇ.ಎಲ್.

ಪ್ರಧಾನ ಕಾರ್ಯದರ್ಶಿ
**ಶ್ರೀ ನಾ. ದಿನೇಶ್ ಹೆಗ್ಡೆ**
ಸಾಮಾಜಿಕ ಕಾರ್ಯಕರ್ತರು

ಖಜಾಂಚಿ
**ಶ್ರೀ ಗಣಪತಿ ಹೆಗಡೆ**
ಸಾಮಾಜಿಕ ಕಾರ್ಯಕರ್ತರು

ಸದಸ್ಯರು
ಶ್ರೀ ಅಶೋಕ್ ಸೋನಕರ್, ಸೀನಿಯರ್ ಸೂಪರಿಂಟೆಂಡೆಂಟ್ ಆಫ್ ಪೋಸ್ಟ್ ಆಫೀಸಸ್ (ನಿ)
ಶ್ರೀ ಕೆ.ಎಸ್. ನಾರಾಯಣ, ಸಾಮಾಜಿಕ ಕಾರ್ಯಕರ್ತರು
ಶ್ರೀ ಬಿ.ಎಸ್. ರವಿಕುಮಾರ್, ಸಾಮಾಜಿಕ ಕಾರ್ಯಕರ್ತರು
ಶ್ರೀಮತಿ ಮಾಲಿನಿ ಭಾಸ್ಕರ್, ಸಾಮಾಜಿಕ ಕಾರ್ಯಕರ್ತರು
ಶ್ರೀ ಗಜಾನನ ಲೋಂಢೆ, ನಿವೃತ್ತ ಅಧಿಕಾರಿಗಳು, ನೋಕಿಯಾ ಟೆಕ್ನಾಲಜಿ